ಕಲ್ಯಾಣ ಕಿರಣ

ಅಕ್ಟೋಬರ್-2017 ಬೆಲೆ-20 ರೂ.



ಲಿಂಗಾಯತ ಸ್ವತಂತ್ರ ಧರ್ಮದ ಮಾನ್ಯತೆಗಾಗಿ ಬೃಹತ್ ರ್‍ಯಾಲಿ



ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ನಡೆದ ವಿಚಾರ ಸಂಕೀರ್ಣ

ಲಾತೂರಿನಲ್ಲಿ ನಡೆದ ಲಿಂಗಾಯತ ರ್‍ಯಾಲಿ







ಕಲ್ಯಾಣ ಕಿರಣ

ಕಲ್ಯಾಣದ ಜ್ಯೋತಿ

ಜ್ಯೋತಿ ಬೆಳಗುತಿದೆ ಕಲ್ಯಾಣದ ಜ್ಯೋತಿ ಬೆಳಗುತಿದೆ ॥ಪ॥

ಮನುಕುಲದ ಲೇಸನು ಬಯಸಿದ ಬಸವ ಗುರು
ಕಲ್ಯಾಣ ಪುರದೊಳು ಅಂದು ಹೊತ್ತಿಸಿದ ॥ಅ.ಪ॥

ಕಲ್ಯಾಣವೆ ಪ್ರಣತೆಯಾಗಿ ಅದರೊಳು
ಭಕ್ತಿರಸವೆ ತೈಲವಾಗಿ
ಸದಾಚಾರದ ಬತ್ತಿ ಹಿಡಿದು ಬಸವಣ್ಣನೆಂಬ ಜ್ಯೋತಿ
ಮುಟ್ಟಲು ಪರಮ ಪ್ರಕಾಶವ ಚಲ್ಲವರಿದು ॥1॥

ಅಲ್ಲಮ ಪ್ರಭುದೇವ ಸುಜ್ಞಾನಿ
ಶ್ರೀ ಚನ್ನಬಸವಣ್ಣ
ವೀರ ವಿರಾಗಿಣಿ ಶ್ರೀ ಅಕ್ಕಮಹಾದೇವಿ
ಗುಡ್ಡಾಪುರ ದಾನಮ್ಮ ಸತ್ಯಕ್ಕ ಹಚ್ಚಿದ ॥2॥

ಶ್ರೀ ಸಿದ್ಧರಾಮೇಶ್ವರ ಮಡಿವಾಳ
ಮಾಚಯ್ಯ ಕೇತಯ್ಯ
ಹರಳಯ್ಯ-ಮಧುವಯ್ಯ ಅಂಬಿಗರ ಚೌಡಯ್ಯ
ಒಕ್ಕಲಿಗ ಮುದ್ದಣ್ಣ ಅಮುಗಯ್ಯ ಹಚ್ಚಿದ ॥3॥

ನೀಲಮ್ಮ ನಾಗಮ್ಮ ಮುಕ್ತಾಯಕ್ಕ
ಶರಣೆ ಕಲ್ಯಾಣಮ್ಮ
ಅನುಭವ ಮಂಟಪದಿ ಲಿಂಗದೇವನ ನೆನೆದು
ಹಡಪದ ಅಪ್ಪಣ್ಣ ಲಿಂಗಮ್ಮ ಹಚ್ಚಿದ ॥4॥

ಮೋಳಿಗೆ ಮಾರಯ್ಯ ಆತನ ಸತಿ
ಜ್ಞಾನಿ ಗಂಗಾದೇವಿ
ಆಯ್ದಕ್ಕಿ ಮಾರಯ್ಯ ಲಕ್ಕಮ್ಮ ಸತ್ಯಕ್ಕ
ಜೇಡರ ದಾಸಯ್ಯ ದುಗ್ಗಳೆ ಹಚ್ಚಿದ ॥5॥

ಸದ್ಗುರು ಲಿಂಗಾನಂದರ ಸಂಕಲ್ಪದಿಂ
ಬಸವಾತ್ಮಜೆ ಮಾತೆಯು
ಕಾಯಕದಿನದಂದು ಕಲ್ಯಾಣ ಪರ್ವದಿ
ಸಚ್ಚಿದಾನಂದನ ಶರಣರ ಕೂಡಿಸಲು ॥6॥

ಕಲ್ಯಾಣ ಕರೆದಿದೆ ಕಲ್ಯಾಣ ಗುರು ಬಸವಣ್ಣನ ಕಲ್ಯಾಣ
ಶರಣರಾಡಿದ ಕಲ್ಯಾಣ ವಿಶ್ವಕೆ ಬಯಸುತ ಕಲ್ಯಾಣ

ಕಲ್ಯಾಣ ಪರ್ವದಿ ನಲಿಯುವ ಬನ್ನಿ ಕ್ರಾಂತಿಗೀತೆಯ ಹಾಡುವ ಬನ್ನಿ
ಶರಣರ ಋಣವನು ತೀರಿಸಬನ್ನಿ ಬಸವಾತ್ಮಜೆಯ ಬಿನ್ನಹವಿದುವು

– ಮಾತಾಜಿ

॥ ಓಂ ಶ್ರೀ ಗುರು ಬಸವಲಿಂಗಾಯ ನಮಃ ॥
866666

ಸಂಪುಟ-49 ಸಂಚಿಕೆ-10 | ಬಸವ ಶಕೆ -884 ಅಕ್ಟೋಬರ್- 2017 | ಪಂಚ ವಾರ್ಷಿಕ ಸದಸ್ಯತ್ವ 1000 ರೂ. ವಾರ್ಷಿಕ ಚಂದಾ 200 ರೂ.

ಕಿರಣ ಗನ್ನಡಿ

ಲೇಖನಗಳು	ಲೇಖಕರು	ಪುಟ
01. ಕಲ್ಯಾಣದ ಜ್ಯೋತಿ	ಮಾತಾಜಿ	01
02. 16ನೆಯ ಕಲ್ಯಾಣಪರ್ವ	ಆ	03
03. ಸಂಪಾದಕೀಯ	ಮಾತಾಜಿ	05
04. ಬೆಂಗಳೂರಿನಲ್ಲಿ ಬೃಹತ್ ಸಮಾವೇಶ	ಮಾತಾಜಿ	07
05 . ಸುಪ್ರೀಂ ತೀರ್ಪು-ಒಂದು ಚಿಂತನೆ	ಮಾತಾಜಿ	08
06. ಲಿಂಗಾಯತ ಧರ್ಮದಲ್ಲಿ ಮಾನ್ಯತೆ	ಮಾತಾಜಿ	17
07. ಕೆಲವು ಸ್ಮರಣೀಯ ನೆನಪುಗಳು	ಮಾತಾಜಿ	18
08. ಕರ್ಮ-ಕಾಯಕ ಸಿದ್ಧಾಂತ ಬೇರೆ ಬೇರೆ	ಮೀನಾಕ್ಷಿ ಬಾಳೆ	20
09. ಧರ್ಮದ ವಿಚಾರದಲ್ಲಿ ಸುಪ್ರೀಂ ಅಭಿಮತ		23
10. ಅಂಗವೆಂಬ ಭೂಮಿಯ ಮೇಲೆ	ಬಸವಪ್ರಭು ಸ್ವಾಮೀಜಿ	25
11. ಶರಣ ಮೇಳ ಪ್ರಚಾರ ಪಟ್ಟಿ		27
12. ಶರಣನ ಪ್ರಭಾವಲಯ	ವೈ.ಬಿ.ಶ್ರೀಕಾಂತ್	31

ಅಕ್ಟೋಬರ್‌ನಲ್ಲಿ ಬರುವ ಹಬ್ಬ ಹುಣ್ಣಿಮೆ

ಕಲ್ಯಾಣದಲ್ಲಿ 16ನೇ ಕಲ್ಯಾಣಪರ್ವ	-	ಅ. 14,15,16
ಚನ್ನಬಸವೇಶ್ವರ ಜಯಂತಿ	-	ಅಕ್ಟೋಬರ್- 20

Kalyana Kirana -Reg No.19988/70. Monthly Magazine Edited and Published by Pujya Mate Kasturidevi on behalf of Vishwa kalyana Mission Charitable Trust, Basava Mantapa, 2035, 20th Main, Basava Mantapa Road, 2nd Block, Rajajinagar, Bengaluru-560010. Phone : 080-23131476, Send SMS to 9945806297 Email-kalyana.kirana1134@gmail.com

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಕಾಯಕವೇ ಕೈಲಾಸವೆಂಬ ಮಹಾಮಂತ್ರವನ್ನು ಸಾರಿದ ಬಸವ ಕಲ್ಯಾಣ ಸುಕ್ಷೇತ್ರದಲ್ಲಿ ಹದಿನಾರನೆಯ

ಕಲ್ಯಾಣ ಪರ್ವ

2017ರ ಅಕ್ಟೋಬರ್ 14, 15 ಮತ್ತು 16ರಂದು

ಶರಣ ಬಂಧುಗಳಿಗೆ ಶರಣು ಶರಣಾರ್ಥಿ.

ಮಹಾಮಾನವತಾವಾದಿ, ಲಿಂಗಾಯತ ಧರ್ಮ ಸಂಸ್ಥಾಪಕ, ಶರಣ ಗಣಮಣಿ ಧರ್ಮಗುರು ಬಸವಣ್ಣನವರ ಕಾರಣಿಕತ್ವ ಮತ್ತು ಸಂದೇಶಗಳಲ್ಲಿ ನಂಬಿಕೆ ಇಟ್ಟು ನಡೆಯುವ ಬಸವ ಭಕ್ತರು, ಬಸವ ಧರ್ಮೀಯರಾದ ಲಿಂಗಾಯತರು ಮತ್ತು ಬಸವಾಯತರೆಲ್ಲರೂ ವರ್ಷಕ್ಕೆ ಒಮ್ಮೆಯಾದರೂ ಒಂದು ಸ್ಥಳದಲ್ಲಿ ಸಮಾವೇಶವಾಗುವುದು ಅತ್ಯಂತ ಅವಶ್ಯಕ. ಇದು ಸಮಾನತೆ ಮತ್ತು ಸಹೋದರತ್ವ ಬೆಳೆಸಲು ಸಹಕಾರಿಯಾಗುವುದು ಎಂಬ ಉದ್ದೇಶದಿಂದ ಆದಿ ಶರಣರ ಸಂಕಲ್ಪದಂತೆ ವಿಶ್ವಗುರು ಬಸವಣ್ಣನವರ ವಿದ್ಯಾಭೂಮಿ, ತಪೋಸ್ಥಾನ, ಐಕ್ಯಕ್ಷೇತ್ರ ಕೂಡಲಸಂಗಮದಲ್ಲಿ ಶರಣ ಮೇಳ ಎಂಬ ಬೃಹತ್ ಧಾರ್ಮಿಕ ಸಮಾವೇಶವನ್ನು 1988ರಿಂದ ಪ್ರತಿವರ್ಷವೂ ಜನವರಿ 11 ರಿಂದ 15ರವರೆಗೆ ನಡೆಸಿಕೊಂಡು ಬರಲಾಗುತ್ತಿದ್ದು 30ನೆಯ ಶರಣ ಮೇಳವು ಇದೇ 2017ರ ಜನವರಿಯಲ್ಲಿ ಯಶಸ್ವಿಯಾಗಿ ಜರುಗಿದೆ. ಬೀದರ ಜಿಲ್ಲೆಯಲ್ಲಿರುವ ಬಸವ ಕಲ್ಯಾಣವು 12ನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರ ಕಾರ್ಯಕ್ಷೇತ್ರವಾಗಿತ್ತು. ಲಿಂಗದೇವನ ಅನುಗ್ರಹವಾಗಿ ಇಷ್ಟಲಿಂಗದ ಪರಿಕಲ್ಪನೆ ಮೂಡಿ ಧರ್ಮಪಿತರು ಲಿಂಗಾಯತ ಧರ್ಮದ ರೂಪು ರೇಷೆ ಹಾಕಿದುದು ಕೂಡಲ ಸಂಗಮದಲ್ಲಿ. ಆ ನೀಲನಕ್ಷೆಯು ಕಾರ್ಯರೂಪಕ್ಕೆ ಬಂದುದು ಬಸವ ಕಲ್ಯಾಣದಲ್ಲಿ.

"ಕಪಿಲಸಿದ್ಧಮಲ್ಲಿಕಾರ್ಜುನಾ, ನಿಮ್ಮ ಸಂಗನ ಬಸವಣ್ಣ ಬಂದು
ಕಲ್ಯಾಣದಲ್ಲಿ ಮಹಾಮನೆಯ ಕಟ್ಟದಡೆ
ಮರ್ತ್ಯಲೋಕವೆಲ್ಲವೂ ಭಕ್ತಿಸಾಮ್ರಾಜ್ಯವಾಯಿತು"

ಎಂದು ಬಸವಯೋಗಿ ಸಿದ್ಧರಾಮೇಶ್ವರರು ಹೇಳುವಂತೆ, "ಅಯ್ಯಾ, ಭಕ್ತಿಗೆ ಬೀಡಾದುದು ಕಲ್ಯಾಣ 36 ವರ್ಷ, ಅನುಭವಕ್ಕೆ ಶಿವಸದನವಾದುದು 27 ವರ್ಷ" ಎಂದು ಧರ್ಮಪಿತರು ಸಾರುವಂತೆ ಬಸವ ಕಲ್ಯಾಣವು ವಿಕ್ರಮನಾಮ ಸಂವತ್ಸರ (ಕ್ರಿ.ಶ.1160) ದಿಂದ ರಾಕ್ಷಸನಾಮ ಸಂವತ್ಸರ (ಕ್ರಿ.ಶ.1196)ದ ವರೆಗೆ ಶ್ರೀ ಗುರು ಬಸವಣ್ಣನವರ ಪರುಷ ಪಾದದಿಂದ ಭಕ್ತಿಯ ಬೀಡಾಗಿತ್ತು. ಈ ಪವಿತ್ರ ಶರಣ ಭೂಮಿಯು ಇಂದು ನಮಗೆಲ್ಲ ಧರ್ಮಭೂಮಿ (Holy land). ಇಂಥ ಸುಕ್ಷೇತ್ರದಲ್ಲಿ ವರ್ಷಕ್ಕೊಮ್ಮೆಯಾದರೂ ಬಸವ ಭಕ್ತರು ಸಮಾವೇಶವಾಗಬೇಕೆಂದು 2002ನೆಯ ಇಸವಿಯಿಂದಲೂ ಕಲ್ಯಾಣಪರ್ವ ಎಂಬ ವಾರ್ಷಿಕ ಉತ್ಸವವನ್ನು ನಡೆಸಲಾಗುತ್ತಿದೆ. 2017ನೆಯ ಇಸವಿಯಲ್ಲಿ 16ನೆಯ ಕಲ್ಯಾಣ ಪರ್ವವು ಜರುಗಲಿದ್ದು, ಅಕ್ಟೋಬರ್ 14, 15 ಮತ್ತು 16ರಂದು ನಡೆಯಲಿದೆ.

ಶರಣ(ಶನಿ)ವಾರ, ದಿ. 14ರಂದು ಬೆಳಿಗ್ಗೆ 10-30ಕ್ಕೆ ಉದ್ಘಾಟನೆ ಮತ್ತು ಸಾಮೂಹಿಕ ಪ್ರಾರ್ಥನೆ, ಮಧ್ಯಾಹ್ನ 3-30ರಿಂದ 5-30ರವರೆಗೆ ರಾಷ್ಟ್ರೀಯ ಬಸವ ದಳದ ಸಮಾವೇಶ ; ಸಂಜೆ -6-30ರಿಂದ ಚಿಂತನಗೋಷ್ಠಿ. ದಿ.15, ಭಾನು(ದೇವ)ವಾರದಂದು ಬೆಳಿಗ್ಗೆ 07-30ಕ್ಕೆ ಶರಣ ವಂದನೆ-ಶರಣರಿಗೆ ಶರಣಾರ್ಥಿ, ಬೆಳಿಗ್ಗೆ 10-30ಕ್ಕೆ ಸಾಮೂಹಿಕ ಪ್ರಾರ್ಥನೆ ಮಧ್ಯಾಹ್ನ 3-30ರಿಂದ 5-30ರವರೆಗೆ ಆಶುಭಾಷಣ ಸ್ಪರ್ಧೆ, ಸಂಜೆ 6-30ರಿಂದ ಚಿಂತನಗೋಷ್ಠಿ, ದಿ. 16 ಸೋಮ(ಶಿವ)ವಾರ

ದಂದು ಅಕ್ಕನಾಗಲಾಂಬಿಕೆಯ ಸಂಸ್ಮರಣೆಯ ನಿಮಿತ್ತ ಬಸವ ಧರ್ಮ ವಿಜಯೋತ್ಸವ ಕಾರ್ಯಕ್ರಮ ನಂತರ ಅಲ್ಲಮಪ್ರಭು ಶೂನ್ಯ ಪೀಠಾರೋಹಣ ಮತ್ತು ಸಮಾರೋಪ ಸಮಾರಂಭ ಜರುಗಲಿವೆ.

ಕಲ್ಯಾಣ (ಗಣ) ಪರ್ವಕ್ಕೆ ಧನ ಸಹಾಯ

ಕಲ್ಯಾಣ ಎಂಬುದು ಒಂದು ಸ್ಥಳದ ಹೆಸರು; ಮತ್ತು ವಿಶ್ವಗುರು ಬಸವಣ್ಣನವರ ಧ್ಯೇಯವೇ ಎಲ್ಲ ಮಾನವರ ಲೇಸು -ಕಲ್ಯಾಣ. ಆದರ್ಶ ಕಲ್ಯಾಣ ರಾಜ್ಯ (Welfare state) ನಿರ್ಮಾಣವೇ ಅವರ ಹೋರಾಟದ ಗುರಿಯಾಗಿತ್ತು. ಗಣ ಎಂದರೆ ಸಮೂಹ, ಪರ್ವ ಎಂದರೆ ಹಬ್ಬ, ಶರಣ ಗಣವು ಶರಣ ಭೂಮಿ ಬಸವ ಕಲ್ಯಾಣದಲ್ಲಿ ನೆರೆದು ಆದಿ ಶರಣರ ಜೀವನ-ಸಾಧನೆ-ಸಂದೇಶಗಳನ್ನು ಕೊಂಡಾಡುವ ಹಬ್ಬ ಈ ಕಲ್ಯಾಣ ಪರ್ವ. ಅಂದು ಧರ್ಮಪಿತ ಬಸವಣ್ಣನವರು ಗಣಪರ್ವಗಳನ್ನು ಕಲ್ಯಾಣದಲ್ಲಿ ನಡೆಸುತ್ತಿದ್ದು, ಭಕ್ತರು ಅಂಗ, ವಂಗ, ಕಳಿಂಗ, ಗುರ್ಜರ, ಸಿಂಹಳ ಮುಂತಾದ ಭಾಗಗಳಿಂದೆಲ್ಲ ಸಮಾವೇಶವಾಗುತ್ತಿದ್ದುದಾಗಿ ಹರಿಹರ, ಸಿಂಗಿರಾಜ ಮುಂತಾದವರು ತಮ್ಮ ಕಾವ್ಯಗಳಲ್ಲಿ ಬಣ್ಣಿಸುತ್ತಾರೆ. ಅಂಥ ಗಣಪರ್ವವನ್ನು ಇಂದು ನೀವು ನಾವು ಮಾಡಿ ತೋರಿಸಬೇಕಾಗಿದೆ. ಅಕ್ಟೋಬರ್ 13ರ ರಾತ್ರಿಯಿಂದ ಅಕ್ಟೋಬರ್ 17ರ ಬೆಳಗಿನವರೆಗೆ ಕಲ್ಯಾಣ ಪರ್ವದಲ್ಲಿ ಸಮಾವೇಶವಾಗುವ ಶರಣ ಬಂಧುಗಳಿಗೆ ವಸತಿ ಮತ್ತು ಪ್ರಸಾದದ ವ್ಯವಸ್ಥೆಯನ್ನು ಮಾಡ ಬೇಕಾಗುತ್ತದೆ. ಭವ್ಯವಾದ ಸಭಾ ಮಂಟಪ, ಶಾಮಿಯಾನಾ ಕೊಠಡಿಗಳು, ವಿಶಾಲವಾದ ಪ್ರಸಾದ (ಊಟ)ಮಂಟಪ ಮುಂತಾದವುಗಳ ವ್ಯವಸ್ಥೆ ಮಾಡಲು ಅಪಾರವಾದ ಹಣದ ಆವಶ್ಯಕತೆ ಇರುತ್ತದೆ. ದಾನಿಗಳು ಮುಂದೆ ಸೂಚಿಸಿದಂತೆ ಧನ ಸಹಾಯ ಮಾಡಬಹುದು. ಶರಣ ಬಂಧುಗಳು ಒಂದು ಹೊತ್ತಿನ ಪ್ರಸಾದ ದಾಸೋಹದ ವೆಚ್ಚವನ್ನು ಭರಿಸಲೂ ಅವಕಾಶ ಉಂಟು.

1. ಮಹಾಪೋಷಕರು	:	15000 ರೂ. ಮತ್ತು ಮೇಲೆ ಕೊಟ್ಟವರು
2. ಪೋಷಕರು	:	10000 ರೂ. ಮತ್ತು ಮೇಲೆ ಕೊಟ್ಟವರು
3. ದಾನಿಗಳು	:	5000 ರೂ. ಮತ್ತು ಮೇಲೆ ಕೊಟ್ಟವರು
4. ಹಿತೈಷಿಗಳು	:	3000 ರೂ
5. ಸ್ವಾಗತ ಸಮಿತಿ ಸದಸ್ಯತ್ವ	:	600 ರೂ
6. ಪ್ರತಿನಿಧಿ ಶುಲ್ಕ	:	300 ರೂ.

ಅನ್ನದಾಸೋಹಕ್ಕಾಗಿ ಭಕ್ತಿಪೂರ್ವಕ ಕಾಣಿಕೆಗಳನ್ನು ಶಕ್ತ್ಯಾನುಸಾರ ಕೊಡಬಹುದು.

ವಿ.ಸೂ. : ವಾರ್ಷಿಕ ಸಮಾವೇಶವಾದ ಕಲ್ಯಾಣಪರ್ವಕ್ಕೆ ತಮ್ಮ ಕೊಡುಗೆ ನಿರಂತರವಾಗಿ ಇರಲಿ ಎಂಬ ಇಷ್ಟವಿದ್ದವರು 10000/15000 ರೂಪಾಯಿಗಳ ಪುದುವಟ್ಟು (F.D) ಇಡಲು ದೇಣಿಗೆ ನೀಡಿದರೆ, ಈ ಪುದುವಟ್ಟಿನ ಬಡ್ಡಿಯ ಹಣವನ್ನು ಕಲ್ಯಾಣಪರ್ವದ ದಾಸೋಹಕ್ಕೆ ವಿನಿಯೋಗಿಸಲಾಗುವುದು. ರಸೀತಿ ಪುಸ್ತಕ, ಕರಪತ್ರಗಳನ್ನು ಪಡೆದು ದೇಣಿಗೆ ಸಂಗ್ರಹಿಸುವವರಿಗೂ ಅವಕಾಶವಿದೆ.

ಇನ್‌ಕಮ್ ಟ್ಯಾಕ್ಸದಲ್ಲಿ 80ಜಿ ರಿಯಾಯಿತಿಯ ಸೌಲಭ್ಯವೂ ಇದೆ.

**ಪೂಜ್ಯ ಶ್ರೀ ಮಹಾಜಗದ್ಗುರು
ಮಾತೆ ಮಹಾದೇವಿ**
ಕಾರ್ಯಾಧ್ಯಕ್ಷೆ, ಬಸವ ಧರ್ಮ ಪೀಠ (ರಿ.)
ಬಸವ ಮಂಟಪ, 2035, 20ನೆಯ ಮುಖ್ಯರಸ್ತೆ,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು-560010
☎:080-22923736/9448137508

ಪೂಜ್ಯ ಶ್ರೀ ಜಗದ್ಗುರು ಸಿದ್ಧರಾಮೇಶ್ವರ ಸ್ವಾಮಿಗಳು
ಪೀಠಾಧ್ಯಕ್ಷರು, ಅಲ್ಲಮಪ್ರಭು ಶೂನ್ಯ ಪೀಠ
ಬಸವ ಧರ್ಮ ಪೀಠ (ರಿ.)
ಬಸವ ಮಹಾಮನೆ, ಬಸವ ಕಲ್ಯಾಣ-585 327
ತಾ-ಬಸವಕಲ್ಯಾಣ, ಜಿ-ಬೀದರ್
☎: 08481-252856/9448732456

ಸಂಪಾದಕೀಯ



ತ್ಯಾಗದಿಂದಲೇ ಮೌಲ್ಯಗಳ ಉಳಿವು

17/09/2017 ದಿನಪತ್ರಿಕೆ ಯಲ್ಲಿ ಒಂದು ಸುದ್ದಿ ಬಂದಿದೆ. "ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನೂರಾರು ಕೋಟಿ ರೂ. ಆಸ್ತಿ, ಸುಂದರ ಸಂಸಾರ ಜೊತೆಗೆ ಮುದ್ದಾದ ಮಗು. ಇಷ್ಟೆಲ್ಲ ಎದ್ದರೂ ಮಧ್ಯಪ್ರದೇಶದ ಜೈನ ದಂಪತಿಗಳು ಲೌಕಿಕ ಬದುಕಿಗೆ ಬೆನ್ನು ಹಾಕಿ ಸನ್ಯಾಸ ಸ್ವೀಕರಿಸಲು ಮುಂದಾಗಿದ್ದಾರೆ. "ಎಂಬುದು ಪಿ. ಯು. ಸಿ ಯಲ್ಲಿ ಶೇಕಡಾ 99.9 ಪ್ರತಿಶತ ಅಂಕಗಳಿಸಿ ಗುಜರಾತ್ ರಾಜ್ಯಕ್ಕೆ ಪ್ರಥಮ ರ‍್ಯಾಂಕ್ ಗಳಿಸಿದ್ದ ವಿದ್ಯಾರ್ಥಿಯೊಬ್ಬ ಇತ್ತೀಚೆಗೆ ಸನ್ಯಾಸ ಸ್ವೀಕರಿಸಿ ಎಲ್ಲರಿಗೂ ಅಚ್ಚರಿ ಮೂಡಿಸಿದ್ದ. ಇದೀಗ ಮಧ್ಯಪ್ರದೇಶದ ಸುಮಿತ್ ರಾಠೋಡ (35) ಅವರ ಪತ್ನಿ ಅನಾಮಿಕಾ ಉಭಯತರೂ ಸನ್ಯಾಸ ಸ್ವೀಕರಿಸಲು ಮುಂದಾಗಿದ್ದಾರೆ. ದಿನಾಂಕ: 23 ರಂದು ಗುಜರಾತಿನ ಸೂರತ್‌ನ್ನಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಇಬ್ಬರೂ ದೀಕ್ಷೆ ಸ್ವೀಕರಿಸಲಿದ್ದಾರೆ.

ಅಧ್ಯಾತ್ಮದತ್ತ ಸೆಳೆತ ಹೊಂದಿದ್ದ ಸುಮಿತ್ 8 ತಿಂಗಳ ಹಿಂದೆಯೇ ಸನ್ಯಾಸ ಸ್ವೀಕರಿಸಲು ನಿರ್ಧರಿಸಿದ್ದರು. ಕಳೆದ ಆಗಸ್ಟ್ 22 ರಂದು ಸೂರತ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ತಾವು ಸನ್ಯಾಸ ಸ್ವೀಕರಿಸುವುದಾಗಿ ಘೋಷಿಸಿದ್ದರು. ಆದರೆ ಪತ್ನಿಯ ಅನುಮತಿ ಪಡೆಯುವಂತೆ ಆಚಾರ್ಯರು ಸೂಚಿಸಿದ್ದರು. ಪತಿಯ ನಿರ್ಧಾರವನ್ನು ಬೆಂಬಲಿಸಿದ ಪತ್ನಿ ಅನಾಮಿಕಾ ತಾನೂ ಜೈನ ಸನ್ಯಾಸತ್ವ ಸ್ವೀಕರಿಸುವ ನಿರ್ಧಾರ ಪ್ರಕಟಿಸಿದರು. ಇದರಿಂದ ಆಘಾತಗೊಂಡ ಕುಟುಂಬ ಸೂರತ್‌ಗೆ ತೆರಳಿ ಅವರ ಮನವೊಲಿಸಲು ಯತ್ನಿಸಿದರೂ ನಿರ್ಧಾರವನ್ನು ಬದಲಿಸಲು ಸಾಧ್ಯವಾಗಲಿಲ್ಲ. ಹೀಗಾಗಿ ಕುಟುಂಬದವರು ದಂಪತಿಯ ನಿರ್ಧಾರಕ್ಕೆ ಒಪ್ಪಿಗೆ ಸೂಚಿಸಿದರು.

ಅನಾಮಿಕಾ 8 ನೇ ತರಗತಿಯಲ್ಲಿ ಗೋಲ್ಡ್ ಮೆಡಲಿಸ್ಟ್. ಇಂಜನೀಯರಿಂಗ್ ಪದವಿ ಪಡೆದ ಬಳಿಕ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ ಝಿಂಕ್ ಕಂಪನಿಯಲ್ಲಿ ಕೆಲಸ ನಿರ್ವಹಿಸಿದ್ದಾರೆ. ಸುಮಿತ್ ಲಂಡನ್‌ನಲ್ಲಿ ಮ್ಯಾನೇಜ್‌ಮೆಂಟ್ ಡಿಪ್ಲೋಮಾ ಪಡೆದಿದ್ದಾರೆ. ತಮ್ಮ ಕುಟುಂಬದ ಉದ್ಯಮವನ್ನು ನಿರ್ವಹಿಸುತ್ತಿದ್ದರು. ಈ ದಂಪತಿಗಳಿಗೆ ಮೂರು ವರ್ಷದ ಮಗುವಿದ್ದು, ಇವರು ಸನ್ಯಾಸ ಸ್ವೀಕರಿಸಿದ ಮೇಲೆ ಮಗು ಅಜ್ಜಿಯ ಮನೆಯಲ್ಲಿ ಆಶ್ರಯ ಪಡೆಯುವುದಾಗಿ ತಿಳಿಸಿದ್ದಾರೆ. ಅನಾಮಿಕಾ ತಂದೆ ಅಶೋಕ ಚಾಂದಾಲಿಯ ಮಗುವಿಗೆ ಎಲ್ಲ ರೀತಿಯ ಅನುಕೂಲ ಕಲ್ಪಿಸಿ ಬೆಳೆಸುವುದಾಗಿ ಹೇಳಿದ್ದಾರೆ.

ಜೈನ ಸಮಾಜದಲ್ಲಿ ಅನೇಕ ವಿದ್ಯಾವಂತರೂ, ಶ್ರೀಮಂತರೂ ಸನ್ಯಾಸ ಸ್ವೀಕರಿಸುವುದು ಸಾಮಾನ್ಯವಾಗಿದೆ. ಅನೇಕ ತರುಣರು, ತರುಣಿಯರೂ ಸನ್ಯಾಸ ಸ್ವೀಕರಿಸುವುದು ಆಗಾಗ ಕೇಳಿ ಬರುತ್ತಲೇ ಇರುತ್ತದೆ. ಅವರುಗಳು ಸನ್ಯಾಸ ಸ್ವೀಕರಿಸುವಾಗ ಸಮಾಜದವರು ಮೆರವಣಿಗೆ ಮಾಡಿ, ಗೌರವಿಸಿ, ಸಂಭ್ರಮಿಸುತ್ತಾರೆ. ಇದನ್ನು ನೋಡಿದಾಗ, ಕೇಳಿದಾಗ ನನಗೆ ಖಿನ್ನತೆ ಉಂಟಾಗುತ್ತದೆ. ವೀರ ವೈರಾಗ್ಯ ನಿಧಿ ಅಕ್ಕಮಹಾದೇವಿ,

ವೈರಾಗ್ಯ ನಿಧಿ ಅಲ್ಲಮಪ್ರಭು, ಚನ್ನಬಸವಣ್ಣ ಹಾಗೂ ಸಿದ್ಧರಾಮೇಶ್ವರರ ಉದಾಹರಣೆ ಕಣ್ಣೆದುರಿಗೆ ಇದೆ. ಫೋಟೋ ಇಟ್ಟು ಪೂಜಿಸುತ್ತಾರೆ. ಆದರೆ ತಮ್ಮ ಮಗ ಅಥವಾ ಮಗಳು ವೈರಾಗ್ಯ ಜೀವನಕ್ಕೆ ಹೋಗುತ್ತೇನೆಂದರೆ ಎಳೆದು ಜಗ್ಗುತ್ತಾರೆ. ಒತ್ತಾಯದಿಂದ ಮದುವೆ ಮಾಡುತ್ತಾರೆ. ಸಾಮಾನ್ಯವಾಗಿ ಸಾಧಕರು ಕಷ್ಟಪಟ್ಟು ಬಿಡಿಸಿಕೊಂಡು ಹೊರಗೆ ಬರಬೇಕಾಗುತ್ತದೆ.

ತ್ಯಾಗ ಬಹುದೊಡ್ಡ ಅವಶ್ಯಕತೆಯಾಗಿದೆ. ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕರು ತ್ಯಾಗ ಮಾಡಿದರೆಂದೇ ನಾವಿಂದು ಸ್ವತಂತ್ರ ಭಾರತದಲ್ಲಿ ಉಸಿರಾಡುತ್ತಿದ್ದೇವೆ. ಕೇವಲ ಹೆಂಡತಿ ಮಕ್ಕಳು, ಮನೆ, ಆಸ್ತಿ ಇವುಗಳನ್ನು ಗಳಿಸುವುದೇ ಇಡೀ ಜೀವನದ ಗುರಿಯಾಗುತ್ತದೆ. ಅಲ್ಲಮ ಪ್ರಭುದೇವರು ಹೇಳುವಂತೆ " ಸಾಸಿವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖವನ್ನು ಅನುಭವಿಸಬೇಕಾಗುತ್ತದೆ. ನಮ್ಮ ಜೀವನದಲ್ಲಿ ಸಾಕಷ್ಟು ಶ್ರಮವಹಿಸಬೇಕಾಗುತ್ತದೆ. ಆದರೆ ಒಂದು ಬಗೆಯ ಸಂತೃಪ್ತಿ ಆನಂದವನ್ನು ಕೊಡುತ್ತದೆ.

ಆದ್ದರಿಂದ ಇಂದು ಹೆಚ್ಚು ಜನ ತ್ಯಾಗಿಗಳು (ಸನ್ಯಾಸಿಗಳು) ಮತ್ತು ಆದರ್ಶ ಗೃಹಸ್ಥರೂ ಮೌಲ್ಯಗಳ ಉಳಿವಿಗೆ ಸಿದ್ಧರಾಗಬೇಕಾಗಿದೆ. ತನು-ಮನ-ಧನ-ಅಭಿಮಾನ (Missionary zeal) -ಸಮಯ-ಪ್ರಾಣ ಇವನ್ನು ಅರ್ಪಿಸಲು ಸಿದ್ಧರಾಗಬೇಕು. ಸನ್ಯಾಸಿಗಳು, ತ್ಯಾಗಿಗಳು ಪೂರ್ಣಾವಧಿ ಕಾರ್ಯಕರ್ತರಾದರೆ, ಗೃಹಸ್ಥರು ಸಮಯವನ್ನು ಕೊಟ್ಟು ಅಲ್ಪಾವಧಿ ಕಾರ್ಯಕರ್ತರಾಗಿ ಸೇವೆ ಸಲ್ಲಿಸಬೇಕು. ಜೀವನದಲ್ಲಿ ಅಗತ್ಯವಿದ್ದಷ್ಟು ಗಳಿಕೆಯ ಕಡೆಗೆ ಗಮನ ಕೊಟ್ಟು, ಸಾಧ್ಯವಾದಷ್ಟು ಸಮಯವನ್ನು ಧರ್ಮ-ತತ್ವಗಳ ಉಳುವಿಗಾಗಿ, ಬೆಳವಣಿಗೆಗಾಗಿ ಕೊಡಬೇಕೆಂಬುದೇ ನಮ್ಮ ಬಯಕೆ.

ಟಿ.ವಿ. ನೋಡುವವರು ಸಹಿಸಿಕೊಳ್ಳಬೇಕು

ಸಾಮಾನ್ಯವಾಗಿ ಮಾಧ್ಯಮಗಳು ಅದರಲ್ಲೂ ಟಿ.ವಿ. ಚಾನಲ್‌ಗಳು ವಿಷಯಗಳನ್ನು ತಿರುಚುವುದರಲ್ಲಿ ಆ ಬಗ್ಗೆ ಚರ್ಚೆ ಏರ್ಪಡಿಸಿ ಜನಗಳ ಕುತೂಹಲ ಕೆರಳುಸುವುದರಲ್ಲಿ ಬಹಳ ಎಕ್ಸ್‌ಪರ್ಟ್. ಅದರಲ್ಲೂ ಕೆಲವು ಚಾನೆಲ್ ಹೊರತುಪಡಿಸಿದರೆ ಹೆಚ್ಚಿನವು ಹಿಂದೂವಾದಿಗಳು. ಅದರಲ್ಲೂ ಬ್ರಾಹ್ಮಣವಾದಿಗಳು. ಅವುಗಳ ನಿರ್ವಾಹಕರು (ಆಂಕರ್ಸ್) ಹಿಂದೂವಾದಿಗಳು ಇರುವುದರಿಂದ ಅವರಿಗೆ ಲಿಂಗಾಯತ ಧರ್ಮ ಸ್ವತಂತ್ರವಾಗುವುದು ಇಷ್ಟವಿಲ್ಲ. ಹೀಗಾಗಿ ಸಮೂಹ ಚರ್ಚೆಗಳಲ್ಲಿ ಕೆಲವು ಚಾನಲ್‌ಗಳು ಲಿಂಗಾಯತ ಮತ್ತು ವೀರಶೈವವಾದದ ಉಭಯತರಿಗೂ ಸಮಾನವಾದ ಅವಕಾಶ ಕೊಟ್ಟರೆ, ವಾಗೀಶ್ ಪ್ರಸಾದ, ಕೇಶವ ಕುಮಾರ ಮತ್ತು ರುದ್ರೇಶ ಮುಂತಾದವರು ಸೈದ್ಧಾಂತಿಕವಾಗಿ ಚರ್ಚೆ ಮಾಡದೇ ಅಸಂಭದ್ಧವಾಗಿ ಕೂಗಾಡುತ್ತಾರೆ ಎಂಬುದು ತಿಳಿದೂ ಸಹ ಅವರನ್ನೇ ಚರ್ಚೆಗೆ ಕರೆಯುತ್ತಾರೆ. ಕೊಳ್ಳದ ಮಠದ ಸ್ವಾಮಿಗಳು ಬಾಯಿಗೆ ಬಂದಂತೆ ವೈಯಕ್ತಿಕ ನಿಂದನೆ ಮಾಡುತ್ತಾರೆ ಎಂದು ತಿಳಿದೂ ಸಹ ಅವರನ್ನೇ ಆಹ್ವಾನಿಸುತ್ತಾರೆ. ಇಂತಹ ಕುಯುಕ್ತಿ ಸಾಮಾನ್ಯವಾಗಿದೆ. ಇದರಿಂದ ಅನೇಕ ಶರಣ ಬಂಧುಗಳು ನೊಂದುಕೊಳ್ಳುತ್ತಾರೆ. ಆದ್ದರಿಂದ ಶರಣ ಬಂಧುಗಳು ಸಹನೆ ಬೆಳೆಸುಕೊಳ್ಳಬೇಕು. ಇಂದಿನ ಪರಿಸ್ಥಿತಿಯಲ್ಲಿ ಇದು ಅನಿವಾರ್ಯ ಎಂದು ಶರಣರಿಗೆ ಹೇಳ ಬಯಸುತ್ತೇನೆ.

ಬೆಂಗಳೂರು ನಗರದಲ್ಲಿ ಲಿಂಗಾಯತ ಧರ್ಮ ಮಹಾಸಭಾ
ರಾಷ್ಟ್ರೀಯ ಸಮಾವೇಶ ಮತ್ತು 22ನೆಯ ವಾರ್ಷಿಕೋತ್ಸವ

ದಿನಾಂಕ: ದೇವ (ಭಾನು) ವಾರ, ದಿ.19-11-2017

ಶರಣ ಬಂಧುಗಳೇ,

ಲಿಂಗಾಯತ ಧರ್ಮ ಮಹಾಸಭಾ ಎಂಬ ವಿಶ್ವಸ್ಥಸಂಸ್ಥೆಯು 1995ರಲ್ಲಿ ನೋಂದಣಿಯಾಗಿದೆ. 22 ವರ್ಷಗಳು ತುಂಬಿರುವ ಈ ಸಮಯದಲ್ಲಿ ಇದರ 22 ನೆಯ ವಾರ್ಷಿಕೋತ್ಸವದ ನಿಮಿತ್ತ ರಾಷ್ಟ್ರೀಯ ಸಮಾವೇಶವೊಂದನ್ನು ಏರ್ಪಡಿಸಲಾಗಿದೆ. ಬೆಂಗಳೂರು ನಗರದಲ್ಲಿ ನವೆಂಬರ್ 19, ದೇವ (ಭಾನು) ವಾರದಂದು ಬೆಳಿಗ್ಗೆ 10-30 ಯಿಂದ ನಡೆಯುವ ಈ ಸಮಾವೇಶದಲ್ಲಿ ಕರ್ನಾಟಕ ರಾಜ್ಯ ಸಮಿತಿಯ ಸದಸ್ಯರು ಮಾತ್ರವಲ್ಲದೆ, ಮಹಾರಷ್ಟ್ರ, ತೆಲಂಗಾಣ, ಆಂಧ್ರ, ತಮಿಳುನಾಡು, ನವದೆಹಲಿ ಮುಂತಾದ ರಾಜ್ಯಗಳಲ್ಲಿ ಇರುವ ರಾಷ್ಟ್ರೀಯ ಕಮಿಟಿಯ ಸದಸ್ಯರು ಮತ್ತು ಧರ್ಮಬಂಧುಗಳು, ಬಸವ ತತ್ವಾಭಿಮಾನಿಗಳು ಸಹಿತ ಭಾಗವಹಿಸಲಿದ್ದಾರೆ. ಅನೇಕ ಧಾರ್ಮಿಕ ನೇತಾರರು, ರಾಜಕೀಯ ನೇತಾರರು, ಪ್ರಗತಿಪರ ಚಿಂತನೆಯ ಸಾಹಿತಿಗಳು ಸಮಾನ ಮನಸ್ಕರಾದ ಸಂಘಟನೆಗಳ ಪದಾಧಿಕಾರಿಗಳು-ಸದಸ್ಯರು ಎಲ್ಲ ಪಾಲ್ಗೊಳ್ಳಲಿದ್ದಾರೆ.
ಬೆಳಿಗ್ಗೆ 10-30 ಯಿಂದ ಸಮಾವೇಶವು ಪ್ರಾರಂಭವಾಗುತ್ತದೆ.

ವಿಶೇಷ ಸೂಚನೆ: ಸಮಾವೇಶ ನಡೆಯುವ ನಿರ್ದಿಷ್ಟ ಸ್ಥಳ ಯಾವುದು ಎಂಬುದನ್ನು ಮುಂದಿನ(ನವೆಂಬರ್) ಕಲ್ಯಾಣಕಿರಣದಲ್ಲಿ ಮತ್ತು ಪತ್ರಿಕಾಗೋಷ್ಠಿಗಳ ಮೂಲಕ ತಿಳಿಸಲಾಗುವುದು. ಬೆಳಿಗಿನ ಉಪಾಹಾರ ಮತ್ತು ಮಧ್ಯಾಹ್ನದ ಪ್ರಸಾದ(ಊಟ)ದ ವ್ಯವಸ್ಥೆ ಮಾಡಲಾಗುವುದು.

ಎಲ್ಲ ಕಡೆಯಿಂದ ಟ್ರೇನ್ ಮತ್ತು ಬಸ್ಸುಗಳ ವ್ಯವಸ್ಥೆಯು ಬೆಂಗಳೂರಿಗೆ ಇರುವುದರಿಂದ ಶರಣ ಬಂಧುಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಬೇಕೆಂದು ಕೋರುತ್ತೇವೆ. ಬೆಂಗಳೂರು ನಗರದಲ್ಲಿ ಕಲ್ಯಾಣ ಮಂಟಪಗಳ ಬಾಡಿಗೆ ವಿಪರೀತ ಇರುವುದರಿಂದ ವಸತಿ ವ್ಯವಸ್ಥೆ ಮಾಡಲು ಸಾಧ್ಯವಾಗದು. ಉಳಿಯುವುದಾದಲ್ಲಿ ತಮ್ಮ ವಸತಿ ವ್ಯವಸ್ಥೆ ತಾವೇ ಮಾಡಿಕೊಳ್ಳಬೇಕು.

ಕಾರ್ಯಕ್ರಮ ವ್ಯವಸ್ಥೆ ಮತ್ತು ಪ್ರಸಾದ ದಾಸೋಹಕ್ಕೆ ಉದಾರವಾಗಿ ಕಾಣಿಕೆ ನೀಡಬೇಕೆಂದು ವಿನಂತಿಸುತ್ತೇವೆ.

ಪೂಜ್ಯ ಚನ್ನಬಸವಾನಂದ ಸ್ವಾಮೀಜಿ
ಅಧ್ಯಕ್ಷರು, ರಾಷ್ಟ್ರೀಯ ಸಮಿತಿ
ಮೊ: 9880296108

ಶರಣ.ಚಂದ್ರಮೌಳಿ
ಅಧ್ಯಕ್ಷರು, ಕರ್ನಾಟಕ ರಾಜ್ಯ ಸಮಿತಿ
9448466805

ಪೂಜ್ಯ ಶ್ರೀ ಜಗದ್ಗುರು ಮಾತೆ ಮಹಾದೇವಿ
ಸಂಸ್ಥಾಪಕ ಗೌರವಾಧ್ಯಕ್ಷೆ
ಲಿಂಗಾಯತ ಧರ್ಮ ಮಹಾಸಭಾ(ರಿ.)
ಬಸವ ಮಂಟಪ, 2035, 20ನೇ ಮೇನ್,
2ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು
ದೂ: 080-23131476

ಸುಪ್ರೀಂ ಕೋರ್ಟ್ ತೀರ್ಪು –
ಒಂದು ಚಿಂತನೆ

– ಮಾತಾಜಿ

ವಿಶ್ವಗುರು ಬಸವಣ್ಣನವರ 800ನೆಯ ಬಸವ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ ಶುದ್ಧೀಕರಿಸಿದ ಗುರು ಬಸವಣ್ಣನವರ ವಚನಗಳ ಕೃತಿ ಬಸವ ವಚನ ದೀಪ್ತಿಯನ್ನು 1996 ರಲ್ಲಿ ಪ್ರಕಟಿಸಿದೆ. ಗುರು ಬಸವಣ್ಣನವರ ಜೀವನದಲ್ಲಿ ಮೊಟ್ಟ ಮೊದಲಬಾರಿಗೆ 3 ಹಂತಗಳನ್ನು ಗುರುತಿಸಿದೆ. 1.ಮನೆಯ ಸಂಪ್ರದಾಯದಂತೆ ಬಹುದೇವತೋಪಾಸನೆ 2.ಬಾಲ್ಯದಿಂದ ತಾರುಣ್ಯದವರೆಗೆ ಏಕದೇವತೋಪಾಸನೆ. 3.ಸಾಕ್ಷಾತ್ಕಾರದ ನಂತರ ಏಕದೇವೋಪಾಸನೆ. ಏಕದೇವತೆ–ಶಿವ ಉಪಾಸಕರಾಗಿದ್ದಾಗ ಬರೆದ ವಚನಗಳಲ್ಲಿ ಕೂಡಲ ಸಂಗಮದೇವ ಎಂಬ ವಚನಾಂಕಿತ ಹಾಗೆಯೇ ಇಟ್ಟು, ಸಾಕ್ಷಾತ್ಕಾರದ ನಂತರ ಏಕದೇವೋಪಾಸಕರಾದಾಗ ಬರೆದ ವಚನಗಳಲ್ಲಿ 'ಶಿವ' ಸೂಚಕವಾದ ಕೂಡಲಸಂಗಮದೇವದ ಬದಲಿಗೆ ಪರಮಾತ್ಮ ಸೂಚಕವಾದ 'ಲಿಂಗದೇವ' ಎಂಬ ವಚನಾಂಕಿತ ಇಟ್ಟು ಪುಸ್ತಕವನ್ನು ಹೊರತಂದೆ.

ಪರಮಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿ ಇರುವಾಗಲೇ ನಾನು ಈ ವಿಷಯ ಪ್ರಸ್ತಾಪಿಸಿದೆ. ಬಸವ ಧರ್ಮದ ಸಂಸ್ಕಾರಗಳು ಎಂಬ ಪುಸ್ತಕವನ್ನು 1995 ರ ಜನವರಿಯಲ್ಲಿ ಶರಣ ಮೇಳದಲ್ಲಿ ಬಿಡುಗಡೆ ಮಾಡಿದೆವು. ಆ ಪುಸ್ತಕದಲ್ಲಿ ಒಂದು ವಚನ ಹೀಗೆ ಮುದ್ರಿಸಿದ್ದೆ.

ಅಮೂಲ್ಯನು ಅಪ್ರಮಾಣನು ಅಗೋಚರ ಲಿಂಗವು
ಆದಿ ಮಧ್ಯ ಅವಸಾನಗಳಿಲ್ಲದ ಸ್ವತಂತ್ರ ಲಿಂಗವು
ನಿತ್ಯ ನಿರ್ಮಲ ಲಿಂಗವು
ಅಯೋನಿ ಸಂಭವನಯ್ಯ ನಮ್ಮ ಲಿಂಗದೇವ

ಪೂಜ್ಯ ಗುರುಗಳಿಗೂ ಈ ನನ್ನ ಸಂಶೋಧನೆ ಬಹಳ ಮೆಚ್ಚುಗೆ ಆಯಿತು. ಪೂಜ್ಯರು 1995ರ ಜೂನ್ 30ರಂದು ಲಿಂಗೈಕ್ಯರಾದರು. ಬಸವ ವಚನ ದೀಪ್ತಿಯನ್ನು 1996ರಲ್ಲಿ ಪ್ರಕಟಿಸಿದೆ.

ತಾತ್ವಿಕ ವಿಷಯದ ಚಿಂತನೆ ಇಲ್ಲದ, ಗುರು ಬಸವಣ್ಣನವರ ಜೀವನದ ವಿವಿಧ ಹಂತಗಳ ಅರಿವಿಲ್ಲದ ಅನೇಕರು ಲೌಕಿಕ ನಿಯಮ 'ಒಬ್ಬರ ವಚನಾಂಕಿತ ಇನ್ನೊಬ್ಬರು ಬದಲಿಸಬಾರದು' ಎಂಬುದನ್ನು ಹಿಡಿದುಕೊಂಡು ಹುಯಿಲೆಬ್ಬಿಸಿ ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದು ಬಸವ ವಚನ ದೀಪ್ತಿಗೆ ಮುಟ್ಟುಗೋಲು ಹಾಕಿಸಿದರು. ಈ ನಿರ್ಣಯದ ವಿರುದ್ಧ ನಾವು ಕರ್ನಾಟಕದ ಹೈಕೋರ್ಟಿಗೆ ಹೋದೆವು ನಮ್ಮ ವಕೀಲರು ಊರಲ್ಲಿ ಇಲ್ಲದಿರುವ ಸಮಯದಲ್ಲಿ ಹೈಕೋರ್ಟ್ ತೀರ್ಪು ಬಂದು ಸರ್ಕಾರದ ನಿಷೇಧಾಜ್ಞೆಯನ್ನು ಅದು ಎತ್ತಿ ಹಿಡಿಯಿತು. ನ್ಯಾಯವನ್ನು ಬಯಸಿ ನಾವು ಸುಪ್ರೀಂ ಕೋರ್ಟ್‌ಗೆ ಹೋದೆವು.

ಪುಸ್ತಕ ಮುದ್ರಣಗೊಂಡು 21 ವರ್ಷಗಳು ಆದ ಮೇಲೆ ಈಗ ಸುಪ್ರೀಂ ಕೋರ್ಟ್ ಸಮಾಜದಲ್ಲಿ ಅಶಾಂತಿಯುಂಟಾಗುತ್ತೆ ಎಂಬ ವೀರಶೈವ ಮಹಾಸಭೆಯ ವಾದವನ್ನು ಆಧರಿಸಿ ಕರ್ನಾಟಕ ಸರ್ಕಾರದ ಆದೇಶವನ್ನು ಎತ್ತಿ ಹಿಡಿದು ನಮ್ಮ ಕೇಸ್ ಅನ್ನು ವಜಾ ಮಾಡಿದೆ. ಈ ತೀರ್ಪು ಬರುವ 2 ದಿನ ಮೊದಲಿಗೆ ದಿ.20–9–2017ರಂದು ಪ್ರಜಾವಾಣಿ ಪತ್ರಿಕೆಯ ಮೊದಲನೆಯ ಪುಟದಲ್ಲಿ 'ಅತಿರೇಕಕ್ಕೆ ಕಡಿವಾಣ ಹಾಕಬೇಕು' – ಧರ್ಮದ ವಿಚಾರದಲ್ಲಿ ಸುಪ್ರೀಂ ಕೋರ್ಟ್ ಅಭಿಮತ' ಎಂಬ ಶೀರ್ಷಿಕೆಯಡಿಯಲ್ಲಿ ಕೆಲವು ಅಂಶಗಳು ಪ್ರಕಟವಾದವು. ನ್ಯಾಯಮೂರ್ತಿಗಳಾದ ಶ್ರೀ.ಎಸ್.ಎ.ಬೋಬಡೆ ಹಾಗೂ ಎಲ್.ನಾಗೇಶ್ವರ ರಾವ್ ಅವರಿದ್ದ ದ್ವಿಸದಸ್ಯ ಪೀಠವು ತನ್ನ ಅಭಿಪ್ರಾಯವನ್ನು ಪ್ರಕಟಿಸಿದೆ. (ಇದನ್ನು ಪ್ರತ್ಯೇಕವಾಗಿ ಕಲ್ಯಾಣಕಿರಣದಲ್ಲಿ ಪ್ರಕಟಿಸಲಾಗಿದೆ.)

'ಸಮಾಜದಲ್ಲಿನ ವಿಭಿನ್ನ ದೃಷ್ಟಿಕೋನಗಳಿಗೆ ಸಂಬಂಧಿಸಿದಂತೆ ಸಹಿಷ್ಣುತೆ ಅಗತ್ಯವಾಗಿದ್ದು ಧಾರ್ಮಿಕ ವಿಷಯಗಳಲ್ಲಿ ಕಂಡು ಬರುತ್ತಿರುವ ಅತಿರೇಕದ ವರ್ತನೆಗೆ ಕಡಿವಾಣ ಹಾಕಬೇಕಾಗಿದೆ.' ಎಂಬ ನ್ಯಾಯಮೂರ್ತಿಗಳ ಅಭಿಪ್ರಾಯ ಗಮನಾರ್ಹ.

ಪುಸ್ತಕ ಪ್ರಕಟವಾದ ಸ್ವಲ್ಪ ಸಮಯದ ನಂತರ ಕೆಲವರು ಅಲ್ಲಲ್ಲೇ ಪ್ರತಿಭಟಿಸಿದರು. ಆದರೆ 21 ವರ್ಷಗಳ ಈ ಅವಧಿಯಲ್ಲಿ ಸಹಸ್ರಾರು ಜನರು 'ಲಿಂಗದೇವ' ಪರಿಕಲ್ಪನೆ ಅರ್ಥಮಾಡಿಕೊಂಡು, ಅಳವಡಿಸಿಕೊಂಡು ಬಿಟ್ಟಿದ್ದಾರೆ. ಲಿಂಗದೇವನು ಗುರು ಬಸವಣ್ಣನವರ ಪ್ರಾಣವಾದಂತೆ ಇಂದು ಹಲವಾರು ಜನರ ಪ್ರಾಣವೇ ಆಗಿದ್ದಾನೆ. ಕೊಳ್ಳದ ಮಠದ ಮೂರ್ಖಸ್ವಾಮಿ ಶಾಂತವೀರ ಸ್ವಾಮಿಯು ಲಿಂಗದೇವ ಯಾರು? ಅವನು ಬದುಕಿದ್ದಾನೋ ಸತ್ತಿದ್ದಾನೊ? ಎಂಬ ಪ್ರಶ್ನೆ ಟಿ.ವಿ ಯಲ್ಲಿ ಕೇಳುತ್ತದೆ. ಅದಕ್ಕೆ ಲಿಂಗದೇವನು ಸತ್–ಚಿತ್–ಆನಂದ–ನಿತ್ಯ–ಪರಿಪೂರ್ಣ ಹುಟ್ಟುವವನೂ ಅಲ್ಲ ಸಾಯುವವನೂ ಅಲ್ಲ ಎಂಬ ತಿಳುವಳಿಕೆ ಇಲ್ಲ ಒಂದು ಸತ್ಯವನ್ನು ಸಂಶೋಧನೆಯ ಮೂಲಕ ಕಂಡು ಹಿಡಿದಾಗ ಅದನ್ನು ಅರಿಯುವ ಶಕ್ತಿ ಎಲ್ಲರಿಗೂ ಇರುವುದಿಲ್ಲ. ಅದನ್ನು ಅವರು ವಿರೋಧಿಸುವರು. ಹಾಗಾದರೆ ಸತ್ಯವು ಹೊರಬರುವುದು ಹೇಗೆ? ಅದು ಸ್ಥಾಪನೆಗೊಳ್ಳುವುದು ಹೇಗೆ?

'ಒಂದು ನಿರ್ದಿಷ್ಟ ಗ್ರಂಥ ಓದುವುದರಿಂದ ಭಾವನೆಗಳಿಗೆ ಧಕ್ಕೆ ಉಂಟಾಗುತ್ತದೆ ಎಂದಾದಲ್ಲಿ ಅಂಥ ಗ್ರಂಥ ಓದುವುದನ್ನು ಬಿಡಿ' ಎಂದು ದ್ವಿಸದಸ್ಯ ಪೀಠ ಅಭಿಪ್ರಾಯಪಟ್ಟಿದೆ ಮತ್ತು ಮುಂದುವರಿದು 'ಅವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಪ್ರಶ್ನಿಸಲಾಗದು' ಎಂದು ಪೀಠ ತಿಳಿಸಿತು. ಬಹಳ ಮೌಲಿಕವಾದ ಮತ್ತೊಂದು ಅಭಿಪ್ರಾಯ ಗಮನಿಸಿರಿ 'ನಿಜವಾದ ಧರ್ಮವು ಲೌಕಿಕ ಚಿಂತನೆಯಿಂದ ಮುಕ್ತವಾಗಿಸಿ, ಅಲೌಕಿಕ ಚಿಂತನೆಯತ್ತ ಸಾಗುವುದನ್ನು ಕಲಿಸುತ್ತದೆ. ಧರ್ಮದ ನಿಜವಾದ ಅನುಯಾಯಿಗಳು ಲೌಕಿಕ ವ್ಯವಹಾರಗಳ ಬಗ್ಗೆ ಚಿಂತಿಸದೆ, ಅಲೌಕಿಕತೆಯನ್ನು ಪಾಲಿಸಿದ್ದಾರೆ. ಧರ್ಮರಾಜಕಾರಣದಲ್ಲಿ ಆಸಕ್ತಿ ಇರುವವರು ಮಾತ್ರ ಇಂತಹ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ. ಎಂದು ನ್ಯಾಯಪೀಠ ಹೇಳಿತು. ಕೂಡಲ ಸಂಗಮ ದೇವ ಸ್ಥಾವರ ಲಿಂಗ, ಅದರ ಅರ್ಚನೆ ಒಂದು ಲೌಕಿಕ ನಡೆ. ಲಿಂಗದೇವ–

ನಿರಾಕಾರ, ಅವನ ಅರ್ಚನೆ ಅಲೌಕಿಕ! ಇದು ಅಜ್ಞಾನಿಗಳಿಗೆ ಅರ್ಥವಾಗುವುದಾದರೂ ಹೇಗೆ..?

"ಸಮಾಜದಲ್ಲಿ ಎಲ್ಲ ಪ್ರಕಾರದ ದೃಷ್ಟಿಕೋನಗಳೂ ಇವೆ. ಎಲ್ಲವನ್ನೂ ಖಂಡಿಸುವ ಅಥವಾ ನಿರ್ಬಂಧಿಸುವ ಅಗತ್ಯವಿಲ್ಲ. ಆ ಲೇಖಕರ ದೃಷ್ಟಿಕೋನ ಬದಲಾಗಿದ್ದಲಿ, ಆ ಗ್ರಂಥವನ್ನು ಓದಬೇಡಿ". ಎಂದು ನ್ಯಾಯಮೂರ್ತಿಗಳು ತಿಳಿಸಿದರು. "ಅಂಕಿತನಾಮ ಬದಲಿಸಿರುವ ಚಿಕ್ಕ ಬದಲಾವಣೆಯು ಬಸವಣ್ಣನವರ ಅನುಯಾಯಿಗಳ ಭಾವನೆಗೆ ಧಕ್ಕೆ ತರಲಾರದು." ಎಂದು ಹೇಳಿದ್ದಾರೆ. ಅನಿರೀಕ್ಷಿತವಾಗಿ ಬಂದ ನ್ಯಾಯಮೂರ್ತಿಗಳ ಈ ಅಭಿಪ್ರಾಯವು ನಿಜ ಬಸವಾನುಯಾಯಿಗಳಿಗೆ ಅತೀವ ಸಂತೋಷವನ್ನು ಉಂಟು ಮಾಡಿತು. ಆದರೆ ಇದಕ್ಕೆ ತದ್ವಿರುದ್ಧವಾಗಿ ತೀರ್ಪು ಹೊರಬಂದಿತು. ಇಷ್ಟು ಮೌಲಿಕವಾದ ಅಭಿಪ್ರಾಯ ಕೊಟ್ಟ ನ್ಯಾಯಮೂರ್ತಿಗಳು ಇದಕ್ಕಿದ್ದಂತೆಯೇ ನಮ್ಮ ವಕೀಲರಿಗೆ ವಾದ ಮಾಡಲು ಅವಕಾಶ ಕೊಡದೇ ದಾವೆಯನ್ನು ಅತ್ಯವಸರವಾಗಿ ವಜಾ ಮಾಡಲು ಯಾವ ಜಾದು ನಡೆದಿರಬಹುದು ಎಂದು ಅನೇಕರು ಚಿಂತಿಸಲು ತೊಡಗಿರುವುದು ಪರಮ ಸತ್ಯ.

ವೀರಶೈವ ಮಹಾಸಭಾದ ದ್ವಂದ್ವ ನಿಲುವು

ಬಸವ ವಚನ ದೀಪ್ತಿ ವಿರುದ್ಧ ವಾದ ಮಾಡುವಾಗ ವೀರಶೈವ ಮಹಾಸಭೆಯವರು ಲಿಂಗಾಯತ ಧರ್ಮ ಸಂಸ್ಥಾಪಕರಾದ ಗುರು ಬಸವಣ್ಣನವರ ವಚನಗಳಲ್ಲಿನ 'ಕೂಡಲ ಸಂಗಮದೇವ' ಎಂಬ ಅಂಕಿತನಾಮ ಬದಲಿಸಿ, ಲಿಂಗದೇವ ಎಂಬ ಅಂಕಿತನಾಮ ಎಂದಿದ್ದಾರಲ್ಲದೆ, ವಚನಗಳು ಲಿಂಗಾಯತ ಧರ್ಮದ ಬುನಾದಿಯಾಗಿವೆ. ಅವು ಭಗವದ್ಗೀತೆ, ಬೈಬಲ್, ಕುರಾನ್‌ನಷ್ಟೇ ಮಹತ್ವ ಪಡೆದಿವೆ ಎಂದು ವಾದಿಸಿದ್ದಾರೆ. ಅಂದರೆ ಪರಮ ಸತ್ಯವನ್ನು ಅವರು ಒಪ್ಪಿಕೊಂಡಂತಾಯಿತು. "ಬಸವಣ್ಣನವರೇ ಲಿಂಗಾಯತ ಧರ್ಮ ಸಂಸ್ಥಾಪಕರು; ವಚನ ಸಾಹಿತ್ಯವೇ ಲಿಂಗಾಯತ ಸಂಹಿತೆ ಎಂದು ಪ್ರಮಾಣಪೂರ್ವಕವಾಗಿ ಹೇಳಿದ ವೀರಶೈವ ಮಹಾಸಭೆ ಈಗ ಸಚಿವರ ಮುಂದೆ ಒಪ್ಪಲು ಹಿಂಜರಿಯುವುದು ಹಾಸ್ಯಾಸ್ಪದವಲ್ಲವೆ ? ಈ ದ್ವಂದ್ವ ನಿಲುವು ಖಂಡನೀಯ.

ವಿಶೇಷ ಸೂಚನೆ

ಕಲ್ಯಾಣ ಪರ್ವದಲ್ಲಿ 2018ರ ಗೋಡೆ ಕ್ಯಾಲೆಂಡರ್ ಹಾಗೂ ಪಾಕೆಟ್ ಕ್ಯಾಲೆಂಡರ್ ದೊರೆಯಲಿವೆ. ಹಾಗೂ ಶರಣ ಮೇಳದ ರಸೀದಿ, ವಾಲ್‌ಪೋಸ್ಟರ್ ಕೊಡಲಾಗುವುದು. ಬೇಕಾದವರು ಕೌಂಟರ್‌ನಲ್ಲಿ ಪಡೆಯಬೇಕು.

ಲಿಂಗಾಯತ ಧರ್ಮಕ್ಕೆ ಮಾನ್ಯತೆ ವಿಚಾರವಾಗಿ ಕೇಳಿ ಬರುತ್ತಿರುವ ಮಾತುಗಳಿಗೆ ಉತ್ತರ

– ಮಾತಾಜಿ

ಸಿದ್ದಲಿಂಗಾ ಶ್ರೀಗಳ ಹೇಳಿಕೆಯೇ ಅಂತಿಮವಲ್ಲ

ಪೂಜ್ಯ ಶ್ರೀ ಸಿದ್ದಗಂಗಾ ಶ್ರೀಗಳ ಬಗ್ಗೆ ನಮಗೆ ವೈಯಕ್ತಿಕವಾಗಿ ಗೌರವವಿದ್ದರೂ ವೀರಶೈವ ಮತ್ತು ಲಿಂಗಾಯತ ಎರಡೂ ಒಂದೇ ಎಂಬ ಅವರ ಅಭಿಪ್ರಾಯವನ್ನು ನಾವು ಒಪ್ಪುವುದಿಲ್ಲ. ವೀರಶೈವವು ಆಗಮ ಆಧಾರಿತವಾದ ಶೈವದ ಒಂದು ಪಂಥ. ಲಿಂಗಾಯತವು ವಚನಾಧಾರಿತವಾದ ಸ್ವತಂತ್ರ ಧರ್ಮ.ಬಸವಣ್ಣನವರೇ ಲಿಂಗಾಯತದ ಸಂಸ್ಥಾಪಕರು. ಒಂದು ಮಗುವಿನ ತಂದೆ ಯಾರು ಎಂಬ ಸತ್ಯ ತಾಯಿಗೆ ಗೊತ್ತಿರುವಂತೆ ವಚನ ಸಾಹಿತ್ಯ ಎಂಬ ತಾಯಿ ಗುರು ಬಸವಣ್ಣನವರೇ ಈ ಧರ್ಮದ ತಂದೆ ಎಂದು ಸ್ಪಷ್ಟವಾಗಿ ಹೇಳುತ್ತದೆ. ನಮಗೆ ವಚನ ಸಾಹಿತ್ಯ ಹೇಳುವ ಮಾತು ಪ್ರಮಾಣವೇ ಹೊರತು ಯಾವ ವ್ಯಕ್ತಿಯ ಮಾತೂ ಅಲ್ಲ. ಆದ್ದರಿಂದ ನಮ್ಮ ಚಳುವಳಿಯು ತೀವ್ರವಾಗಿ ಮುಂದುವರೆಯುತ್ತದೆ.

ಶ್ರೀ ಎಂ.ಬಿ.ಪಾಟೀಲ ಒಂದು ಜವಾಬ್ದಾರಿ ಸ್ಥಾನದಲ್ಲಿರುವ ಸಚಿವರು. ಅವರು ಸುಳ್ಳನ್ನು ಏಕೆ ಹೇಳುತ್ತಾರೆ ? ಸಿದ್ದಗಂಗಾ ಶ್ರೀಗಳ ಬಳಿ ವೈಯಕ್ತಿಕವಾಗಿ ಮಾತನಾಡುವಾಗ ಅವರು ಮನದಾಳದಿಂದ ಲಿಂಗಾಯತ ಸ್ವತಂತ್ರ ಧರ್ಮ. ವೀರಶೈವ ಪದ ಇತ್ತೀಚೆಗೆ ಬಂದುದು ಎಂದು ಹೇಳಿದ್ದಾರೆ.ಇದನ್ನು ಎಂ.ಬಿ.ಪಾಟೀಲ ಸ್ಪಷ್ಟಪಡಿಸಿದ್ದಾರೆ.ಇದರಿಂದ ಗಾಬರಿಗೊಂಡ ಕೆಲವರು ಶ್ರೀಗಳ ಬಳಿ ಹೋಗಿ ಅವರ ಮೇಲೆ ಒತ್ತಡವನ್ನು ತಂದಿದ್ದಾರೆ. ಸಿದ್ದಗಂಗಾ ಮಠ ಸಿದ್ಧಲಿಂಗೇಶ್ವರರ ಸಂಪ್ರದಾಯದ್ದು. ಅವರು ಬಸವ ಧರ್ಮವನ್ನು ಪುನರುತ್ಥಾನ ಮಾಡಿ ದಕ್ಷಿಣ ಕರ್ನಾಟಕದಲ್ಲಿ ಅದನ್ನು ಬೆಳೆಸಿದ ಮಹಾಮಹಿಮರು.ಅಂದಾಗ ಸಿದ್ದಗಂಗಾ ಶ್ರೀಗಳು ಲಿಂಗಾಯತ ಧರ್ಮದ ಹೊರತು ಬೇರೆ ಪ್ರಸ್ತಾಪಿಸಲು ಹೇಗೆ ಸಾಧ್ಯ ?

ಪೂಜ್ಯ ಶ್ರೀಗಳಿಗೆ ವಯೋಧರ್ಮಕ್ಕೆ ಅನುಸಾರವಾಗಿ ಈಗ ನೆನಪಿನ ಶಕ್ತಿ ಕಡಿಮೆ. ಅದನ್ನು ದುರುಪಯೋಗ ಪಡಿಸಿಕೊಂಡು ಅವರ ಸುತ್ತಲೂ ಇರುವ ವೀರಶೈವವಾದಿಗಳು ತಾವೇ ಪತ್ರವನ್ನು ಸಿದ್ಧಪಡಿಸಿ ಪೂಜ್ಯ ಸ್ವಾಮೀಜಿಯವರ ಸಹಿ ಪಡೆದಿರಬಹುದೆಂಬ ಅನುಮಾನ ಅನೇಕರನ್ನು ಕಾಡುತ್ತಿದೆ.ಇದರಲ್ಲಿ ಲಿಂಗಾಯತ ಸಮಾಜ ಹಿಂದು ಧರ್ಮವನ್ನು ಬಿಟ್ಟು ಹೋಗಬಾರದೆಂಬ ಅಭಿಪ್ರಾಯ ಹೊಂದಿರುವ ಯಡಿಯೂರಪ್ಪ, ಸೋಮಣ್ಣ,ಜಿ.ಎಸ್.ಬಸವರಾಜು ಮುಂತಾದವರ ಒತ್ತಡವೂ ಸೇರಿದಂತೆ ಕಾಣುತ್ತಿದೆ.

ಅಖಿಲ ಭಾರತ ವೀರಶೈವ ಮಹಾಸಭೆಯವರು ನಂತರ ಹೋಗಿ ಶ್ರೀಗಳ ಮೇಲೆ ಒತ್ತಡವನ್ನು ತಂದು ಎರಡನೇ ಪತ್ರವನ್ನು ಸಿದ್ಧಪಡಿಸಿ ಶ್ರೀಗಳ ಸಹಿ ಪಡೆದು ವೀರಶೈವ ಮಹಾಸಭೆಯ ನಿರ್ಣಯಕ್ಕೆ ಸಹಮತ ಇದೆಯೆಂದು ಹೇಳಿಕೆ ಕೊಡಿಸಿದ್ದಾರೆ. ಹೆಮ್ಮೆಯಿಂದ ಇದೇ ಅಂತಿಮ ನಿರ್ಣಯ ಎಂದು, ಶ್ರೀಗಳಿಗಿಂತ ದೊಡ್ಡವರು ಯಾರೂ ಇಲ್ಲ ಎಂದು ಹೇಳುತಿದ್ದಾರೆ. ನಿಜವಾಗಿಯೂ ಒಂದು ವೇಳೆ ಶ್ರೀಗಳ ಅಭಿಪ್ರಾಯ ಇದೇ

ಆಗಿದ್ದಲ್ಲಿ ಇದನ್ನು ನಾವು ಮಾನ್ಯ ಮಾಡುವುದಿಲ್ಲ.ಲಿಂಗಾಯತ ಧರ್ಮಕ್ಕೆ ಸಾಂವಿಧಾನಿಕ ಮಾನ್ಯತೆ ದೊರೆಯುವವರೆಗೆ ನಮ್ಮ ಹೋರಾಟ ಮುಂದುವರಿಯುತ್ತದೆ.

ಯಡಿಯೂರಪ್ಪ ಮುಂತಾದ ಬಿಜೆಪಿ ನಾಯಕರು ಶ್ರೀಗಳಿಗೆ ಭಾರತ ರತ್ನ ಪ್ರಶಸ್ತಿ ಕೊಡಿಸುವುದಾಗಿಯೂ, ಅವರು ತಟಸ್ಥ ನೀತಿ ತಳೆದು ವೀರಶೈವ ಮತ್ತು ಲಿಂಗಾಯತ ಒಂದೇ, ಇದು ಸ್ವತಂತ್ರ ಧರ್ಮವಲ್ಲ, ಹಿಂದು ಧರ್ಮದ ಅಂಗ ಎಂದು ಹೇಳಬೇಕೆಂದು ಒತ್ತಡ ತಂದಿರುವುದಾಗಿಯೂ ಸುದ್ದಿ ಹಬ್ಬುತ್ತಿದೆ.ಯಾವುದೇ ಪ್ರಶಸ್ತಿಗಿಂತ ತನ್ನ ಧರ್ಮದ, ಸಮಾಜದ ಹಿತ ಬಯಸುವುದೇ ಮುಖ್ಯ ಎಂಬುದನ್ನು ಕಿರಿಯ ಶ್ರೀಗಳು ಎಲ್ಲರಿಗೆ ಮನನ ಮಾಡಿಕೊಡಬೇಕೆಂದು ವಿನಂತಿಸುತ್ತೇವೆ.

ಬಸವಣ್ಣನವರ ಕಾಲದಿಂದಲೂ ಸಂಪ್ರದಾಯವಾದಿಗಳ ಹಾಗೂ ಪುರೋಹಿತ ಶಾಹಿಗಳ ಕಿರುಕುಳ ,ಷಡ್ಯಂತ್ರ ಇದ್ದುದೇ ಆಗಿದೆ.ಆದ್ದರಿಂದ ಎಂ.ಬಿ.ಪಾಟೀಲ ಮುಂತಾದವರು ಧೈರ್ಯದಿಂದ ಮುನ್ನಡೆಯಬೇಕು ಎಂಬುದು ನಮ್ಮ ಆಶಯ.

ಸ್ವಾತಂತ್ರ್ಯ ಪೂರ್ವದಲ್ಲಿ ಲಿಂಗಾಯತವು ಧರ್ಮ ಕಾಲಂನಲ್ಲಿ ಇತ್ತು ದಿನಾಂಕ 14-12-1910 ರಂದು ಜನಿಸಿದ ಗುರಪ್ಪ ಶಿದ್ದಪ್ಪ ಬಿರಾದಾರವರು ಶಾಲಾ ವರ್ಗಾವಣೆ ಪತ್ರದಲ್ಲಿ ಲಿಂಗಾಯತವು ಧರ್ಮದ ಕಾಲಮ್ಮಿನಲ್ಲಿ ಇದೆ. ನಾವು ಹೊಸದಾಗಿ ಯಾವ ಧರ್ಮವನ್ನು ಸ್ಥಾಪಿಸುತ್ತಿಲ್ಲ. 900 ವರ್ಷಗಳ ಹಿಂದೆ ಇದು ಸ್ಥಾಪನೆಯಾಗಿದೆ. ಜೈನ, ಬೌದ್ಧ,ಸಿಖ್ ಧರ್ಮಗಳಂತೆ ಲಿಂಗಾಯತಕ್ಕೆ ಸಾಂವಿಧಾನಿಕ ಮಾನ್ಯತೆ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರ ಸ್ಥಾನ ಕೇಳುತ್ತಿದ್ದೇವೆ.

ಸಿದ್ದಗಂಗಾ ಶ್ರೀಗಳ ಕುರಿತ ಹೇಳಿಕೆಗೆ ಸ್ಪಷ್ಟೀಕರಣ

ಭಾರತ ರತ್ನ ಪ್ರಶಸ್ತಿ ಕುರಿತಂತೆ ನಾನು ಸಿದ್ದಗಂಗಾ ಶ್ರೀಗಳು ಆಮೀಷಕ್ಕೆ ಒಳಗಾಗಿದ್ದಾರೆಂದು ಹೇಳಿಲ್ಲ. ಅವರು ಎಲ್ಲ ಪ್ರಶಸ್ತಿಗಳಿಗೂ ಮೀರಿದವರು. ರಾಜಕೀಯ ಮುಖಂಡರು ಈ ವಿಷಯದಲ್ಲಿ ಆಮಿಷ ತೋರಿದ್ದಾರೆಂದು ಅವರ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದೇನೆ.ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು.ಕೆಲವು ಚಾನಲ್‌ಗಳ ನಿರ್ವಾಹಕರು ತಪ್ಪು ತಪ್ಪಾಗಿ ನಿರೂಪಣೆ ಮಾಡಿ ಜನರನ್ನು ದಾರಿ ತಪ್ಪಿಸುತ್ತಿದ್ದಾರೆ ಎಂದು ಹೇಳದೆ ಗತ್ಯಂತರವಿಲ್ಲ.

ಮಠದ ಆಡಳಿತಾಧಿಕಾರಿಯಾದ ಶಿವಕುಮಾರ ಎಂಬುವವರು ಸ್ಪಷ್ಟೀಕರಣ ನೀಡಿ ಎಂ.ಬಿ.ಪಾಟೀಲ ಅವರು ಶ್ರೀಗಳ ಜೋತೆ ಮಾತನಾಡಿದಾಗ ನಾನು ಅಲ್ಲೇ ಇದೆ. ಲಿಂಗಾಯತವು ಸ್ವತಂತ್ರ ಧರ್ಮ ಇದಕ್ಕೆ ಮಾನ್ಯತೆ ಸಿಗಬೇಕು ಎಂದು ಶ್ರೀಗಳು ಹೇಳಿದರು. ಆಗ ಅಲ್ಲೇ ಇದ್ದ ಮತ್ತೊಬ್ಬ ವ್ಯಕ್ತಿ ವೀರಶೈವ ಲಿಂಗಾಯತ ಎಂದಾಗಬೇಕು ಎಂದಾಗ ಶ್ರೀಗಳು ಲಿಂಗಾಯತ ಎಂದಾಗಬೇಕು. ವೀರಶೈವ ನಂತರ ಬಂದ ಪದ ಎಂದರು. ಎಂದು ಹೇಳಿ ಗೊಂದಲವನ್ನು ನಿರಾಕರಿಸಿದ್ದಾರೆ. ಆದ್ದರಿಂದ ನಂತರ ಬಿಡುಗಡೆಯಾದ ಎರಡು ಪತ್ರಗಳು ಕೃತಕವಾದವು ಎಂಬುದು ಸ್ಪಷ್ಟವಾಗುತ್ತದೆ.

ತಜ್ಞರ ಸಮಿತಿಯ ಅವಶ್ಯಕತೆಯಿಲ್ಲ

ಡಾ.ಶರಣಪ್ರಕಾಶ ಪಾಟೀಲರ ಮನೆಯಲ್ಲಿ ವೀರಶೈವವಾದಿಗಳು ಮತ್ತು ಲಿಂಗಾಯತ ಧರ್ಮದ ಪ್ರತಿಪಾದಕರು ಉಭಯತರೂ ಸೇರಿ ದಿನಾಂಕ 13 ರಂದು ಸಭೆ ನಡೆಸಿದ್ದು,

ಒಮ್ಮತ ರೂಪಿಸಿಲು ಅಥವಾ ನಿರ್ಣಯಿಸಲು ತಜ್ಞರ ಸಮಿತಿ ರಚಿಸಬೇಕೆಂಬ ನಿರ್ಧಾರಕ್ಕೆ ಬಂದಿರುವುದಾಗಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ.

ತಜ್ಞರ ಸಮಿತಿಯ ನಿರ್ಣಯಕ್ಕೆ ಬಸವ ತತ್ತ್ವ ಪ್ರಚಾರಕ ಸಂಘ ಸಂಸ್ಥೆಗಳಾವು ಬದ್ಧವಾಗುವುದಿಲ್ಲ.ಯಾರು ತಜ್ಞರು ಎಂದು ಪ್ರಶ್ನಿಸಬೇಕಾಗುತ್ತದೆ. ನಿವೃತ್ತ ಐ.ಎ.ಎಸ್ ಅಧಿಕಾರಿ ಎಸ್.ಎಂ.ಜಾಮದಾರ್ ಲಿಂಗಾಯತ ಬಗ್ಗೆ ಅಧಿಕೃತ ದಾಖಲೆಗಳನ್ನು ನೀಡುತ್ತಿದ್ದಾರೆ. ಲಿಂಗಾಯತರು ಹಿಂದುಗಳಲ್ಲ, ಲಿಂಗಾಯತರು ವೀರಶೈವರಲ್ಲ ಎಂಬ ಬಗ್ಗೆ ಅಧಿಕೃತ ಅಧ್ಯಯನ ಮಾಡಿ ನಾನು ಪುಸ್ತಕಗಳನ್ನು ಬರೆದು ಪ್ರಕಟಿಸಿದ್ದೇನೆ.ರಂಜಾನ್ ದರ್ಗಾ ಈ ಬಗ್ಗೆ ಅಧಿಕೃತ ಅಧ್ಯಯನ ಮಾಡಿ ಸಾಕಷ್ಟು ಪುಸ್ತಕಗಳನ್ನು ಬರೆದಿದ್ದಾರೆ. ಸತ್ಯವನ್ನು ನಿರ್ಣಯಿಸಲು ಇವೇ ಸಾಕು.

ಇಂದಿನ ಸಭೆ ವಿಫಲವಾಗಿರುವುದಾಗಿಯೂ ಪುನ: ಸಭೆ ಸೇರುವುದಾಗಿಯೂ ಭಾಗವಹಿಸಿದವರು ಹೇಳಿದ್ದಾರೆ.ಇದು ವ್ಯರ್ಥ ಪ್ರಯತ್ನ ಒಮ್ಮತ ರೂಪಿಸಲು ಚರ್ಚಿಸುವುದು ಗಾಳಿ ಗುದ್ದಿ ಮೈನೋಯಿಸಿಕೊಂಡಂತೆ. ಕಲಬುರ್ಗಿಯಲ್ಲಿ ಇದೇ 24 ರಂದು ನಡೆಯುವ ರ್‍ಯಾಲಿಯಲ್ಲಿ ಉಭಯ ಬಣದವರೂ ಭಾಗವಹಿಸಬೇಕೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ವೀರಶೈವವಾದಿಗಳಿಗೆ ಈ ರ್‍ಯಾಲಿಯಲ್ಲಿ ಭಾಗವಹಿಸಲು ನೈತಿಕ ಹಕ್ಕಿಲ್ಲ.

ತಿಪ್ಪಣ್ಣನವರ ಹೇಳಿಕೆಗೆ ಪ್ರತಿಕ್ರಿಯೆ

ತಿಪ್ಪಣ್ಣನವರು ಕೇಂದ್ರದಲ್ಲಿ ಬಿಜೆಪಿ ಸರ್ಕಾರ ಇರುವುದರಿಂದ ವೀರಶೈವಕ್ಕಾಗಲಿ, ಲಿಂಗಾಯತಕ್ಕಾಗಲಿ ಮಾನ್ಯತೆ ದೊರಕುವುದಿಲ್ಲ ಎಂದು ಸವಾಲು ಹಾಕಿದ್ದಾರೆ. ಪ್ರಧಾನಿ ನರೇಂದ್ರ ಮೋದಿ ವಿಚಾರವಂತರು, ಲೋಕ ಸಭೆಯಲ್ಲಿ ಸಾಕಷ್ಟು ಪ್ರಜ್ಞಾವಂತರು ಇರುತ್ತಾರೆ. ಆದ್ದರಿಂದ ಐತಿಹಾಸಿಕ ದಾಖಲೆಗಳಿರುವ ಲಿಂಗಾಯತಕ್ಕೆ ಜೈನ, ಬೌದ್ಧ,ಸಿಖ್ ಧರ್ಮಗಳಿಗೆ ಇರುವಂತೆ ಸಾಂವಿಧಾನಿಕ ಮಾನ್ಯತೆ ಸಿಕ್ಕೇ ಸಿಗುವುದೆಂಬ ಭರವಸೆ ಇದೆ. ತಿಪ್ಪಣ್ಣನವರು ಈ ರೀತಿ ನಿರಾಸೆಯ ಮಾತನಾಡಿ ಜನರನ್ನು ದಾರಿ ತಪ್ಪಿಸಬಾರದೆಂದು ಮನವಿ ಮಾಡುತ್ತೇವೆ. ಅಂತಿಮವಾಗಿ ಕಾನೂನು ಮತ್ತು ಸುಪ್ರಿಂ ಕೋರ್ಟ ಇದ್ದೇ ಇದೆ, ನಾವು ಅದರ ಮೊರೆ ಹೋಗುತ್ತೇವೆ.

ಕಾಗೋಡು ತಿಮ್ಮಪ್ಪನವರ ಅಸಂಬದ್ಧವಾದ

ಸಚಿವ ಕಾಗೋಡು ತಿಮ್ಮಪ್ಪನವರು ಹಿಂದೂ ಧರ್ಮ ಎಲ್ಲಿದೆ ? ಭಾರತದಲ್ಲಿ ಇರುವುದು ಜಾತಿ ಅಷ್ಟೆ, ಆಯಾ ಜಾತಿಯವರು ಅವರ ನಂಬಿಕೆಗಳನ್ನು ಆಧರಿಸಿ ಬದುಕುತ್ತಿದ್ದಾರೆ.ಹಿಂದೂ ಧರ್ಮ ಅಂತ ಯಾರಾದರೂ ಸ್ಥಾಪನೆ ಮಾಡಿದ್ದಾರಾ ? ಎಂಬ ಅಸಂಬದ್ದ ವಿಚಾರಗಳನ್ನು ಪ್ರತಿಪಾದಿಸಿದ್ದಾರೆ.

ಹಿಂದೂ ಧರ್ಮಕ್ಕೆ ಸ್ಥಾಪಕರು ಇಲ್ಲ ಎಂಬುದು ಸತ್ಯವಾದರು ಅನೇಕ ಋಷಿ,ಮುನಿ,ದ್ರಷ್ಟಾರರ ವಿಚಾರಗಳು ಸೇರಿ ಹಿಂದೂ ಧರ್ಮವಾಗಿದೆ. ಈ ಪ್ರಕ್ರಿಯೆಗೆ ನೈಸರ್ಗಿಕ ಧರ್ಮ ಎಂದು ತತ್ತ್ವಜ್ಞಾನದಲ್ಲಿ ಹೇಳಲಾಗುತ್ತದೆ. ಹಿಂದೂ ಸಾಮಾಜಿಕ ವ್ಯವಸ್ಥೆಯಲ್ಲಿ ಚತುರ್ವರ್ಣಗಳು, ಅವುಗಳಲ್ಲಿ ಜಾತಿ,ಕುಲ ಮುಂತಾದವು ಬರುತ್ತವೆ.

ಜಾಗತಿಕ ಧರ್ಮಗಳ ಅಧ್ಯಯನದಲ್ಲಿ ಹಿಂದೂ ಧರ್ಮಕ್ಕೂ ಒಂದು ಸ್ಥಾನವಿದೆ.ಇದಕ್ಕೆ ತನ್ನದೇ ಆದ ಸಿದ್ದಾಂತ, ಸಾಧನೆ(ಯೋಗ),ದರ್ಶನ, ಪೂಜಾ ವಿಧಿ-ವಿಧಾನ ಮುಂತಾದವಿದ್ದು ಸಚಿವ ತಿಮ್ಮಪ್ಪನವರು ಸರಿಯಾಗಿ ಅಧ್ಯಯನ ಮಾಡಬೇಕೆಂದು ಕಳಕಳಿಯಿಂದ ಸೂಚಿಸುತ್ತೇವೆ.

ಲಿಂಗಾಯತ ಧರ್ಮ ಭ್ರಮೆಯಲ್ಲ ವಾಸ್ತವ ಸತ್ಯ: ಸಚಿವ ತಿಮ್ಮಪ್ಪನವರು ಸ್ವತಂತ್ರ ಲಿಂಗಾಯತ ಧರ್ಮ ಎಂಬುದು ಭ್ರಮೆ, ಆದರೂ ಧರ್ಮಕ್ಕಾಗಿ ಹೋರಾಡುತ್ತಿರುವವರಿಗೆ ನಿಜವಾಗಿಯೂ ಕಾಳಜಿ ಇದ್ದರೆ ಎಲ್ಲರೂ ಒಟ್ಟಾಗಿ ಇಂದಿನಿಂದಲೇ ಹೋರಾಟಕ್ಕೆ ಇಳಿಯಿರಿ ಎಂದು ಹೇಳಿದ್ದಾರೆ. ಜಾತಿ ಎಂಬುದು ಕತ್ತಲೇ ಇದ್ದಂತೆ. ಧರ್ಮ ಎಂಬುದು ಬೆಳಕು ಇದ್ದಂತೆ, ಜಾತಿ ಎಂಬುದು ರೋಗವಾದರೆ ಧರ್ಮ ಎಂಬುದು ಔಷಧಿ ಇದ್ದಂತೆ. ಧರ್ಮ ವಿರಹಿತವಾದ ಚಳುವಳಿಗಳಾದ ಕಾರ್ಲಮಾರ್ಕ್ಸನ ಭೌತಿಕವಾದ, ತಮಿಳುನಾಡಿನ ಪೆರಿಯಾರ್ ರಾಮಸ್ವಾಮಿ ನಾಯಕರ ಸಿದ್ಧಾಂತಗಳು ಹೇಗೆ ನಿಸ್ಸತ್ವಗೊಂಡವು ಎಂಬುದನ್ನು ಇತಿಹಾಸದಿಂದ ಅರಿಯಬೇಕು.

ಧರ್ಮವೆಂಬ ದೀಪ ಉರಿಯುವಾಗ ಕೆಲವು ಮೌಢ್ಯತೆ,ಆಚರಣೆ ಮುಕ್ಕಿನಂತೆ ಕುಡಿಗಟ್ಟುತ್ತವೆ, ಹಾಗೆಂದು ಧರ್ಮ ದೀಪವನ್ನು ಆರಿಸಬಾರದು, ಮೂಢಾಚರಣೆಯ ನಿವಾರಣೆಗೆ ಪ್ರಯತ್ನ ಮಾಡಬೇಕು.ಈ ತತ್ತ್ವ,ನಂಬಿಕೆಯ ತಳಹದಿಯ ಮೇರೆಗೆ ಬಸವಣ್ಣನವರು ಧರ್ಮ, ದೇವರ ತಳಹದಿಯ ಮೇಲೆಯೇ ಜಾತಿ ವಿನಾಶಕ್ಕೆ ಯತ್ನಿಸಿದರು. ಈ ಪ್ರಯತ್ನದ ಫಲವಾಗಿಯೇ ಹುಟ್ಟಿದ್ದು ವೈಚಾರಿಕ,ಪ್ರಗತಿಪರ ಧರ್ಮ ಲಿಂಗಾಯತ.

ಯಾವುದಾರರೊಂದು ತತ್ತ್ವ ಸಮುಚ್ಚಯ ಧರ್ಮ ಎನ್ನಿಸಿಕೊಳ್ಳಬೇಕಾದರೆ ಯಾವ್ಯಾವ ಲಕ್ಷಣಗಳು ಇರಬೇಕೆಂಬ ಬಗ್ಗೆ ಧಾರ್ಮಿಕ ತತ್ತ್ವಜ್ಞಾನದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಸಾಹಿತ್ಯದಲ್ಲಿ ತನ್ನದೇ ಆದ ಸಿದ್ದಾಂತ,ಸಾಧನೆ, ದರ್ಶನಶಾಸ್ತ್ರ,ದೀಕ್ಷಾ ಸಂಸ್ಕಾರ, ಸಮಾಜ ಶಾಸ್ತ್ರ, ನೀತಿ ಶಾಸ್ತ್ರ ಇತ್ಯಾದಿ ಅಡಕವಾಗಿವೆ. ಆದ್ದರಿಂದ ಜೈನ, ಬೌದ್ದ, ಸಿಖ್ ಧರ್ಮಗಳಂತೆ ಲಿಂಗಾಯತ ಧರ್ಮವೂ ಸ್ವತಂತ್ರ ಧರ್ಮ.ಅವುಗಳಿಗೆ ಸ್ವತಂತ್ರ ಧರ್ಮದ ಸಾಂವಿಧಾನಿಕ ಮಾನ್ಯತೆ ಸಿಕ್ಕಿರುವಾಗ ಲಿಂಗಾಯತ ಧರ್ಮಕ್ಕೂ ಏಕೆ ಸಿಕ್ಕಬಾರದು ? ಈ ಬಗ್ಗೆ ನಮಗೆ ಸಂಪೂರ್ಣ ಭರವಸೆ ಇದೆ.

ಕಲ್ಯಾಣದಲ್ಲಿ ಕ್ರಾಂತಿಯಾದಾಗ ಜಾತಿವಾದಿಗಳು ಕ್ರೌರ್ಯ ಹೆಚ್ಚಾದಾಗ ಬಸವಣ್ಣ ಕಲ್ಯಾಣ ಬಿಟ್ಟು ಓಡಿಹೋಗಬೇಕಾಯಿತು ಎಂದು ಹಗುರವಾಗಿ ಮಾತನಾಡಿದ್ದಾರೆ, ವರ್ಣಾಂತರ ವಿವಾಹವನ್ನು ಪ್ರೋತ್ಸಾಹಿಸಿ, ಸಮರ್ಥಿಸಿಕೊಂಡ ಬಸವಣ್ಣನವರು ಪ್ರಧಾನಿ ಹುದ್ದೆಗೆ ರಾಜೀನಾಮೆ ಕೊಟ್ಟಾಗ, ಅವರನ್ನು ಗಡಿಪಾರು ಮಾಡಲಾಯಿತು. ಅದನ್ನು ಸ್ವೀಕರಿಸಿ ಅವರು ಕೂಡಲಸಂಗಮದತ್ತ ನಡೆದರು. ಗೊತ್ತಿಲ್ಲದ ವಿಷಯದಲ್ಲಿ ಜವಾಬ್ದಾರಿ ಸ್ಥಾನದಲ್ಲಿರುವವರು ಮಾತನಾಡಲು ಹೋಗಬಾರದೆಂದು ಸೂಚಿಸುತ್ತೇವೆ.

ಬಸವಣ್ಣನವರ ಭಾವಚಿತ್ರ ಸಚಿವರ ಕೊಠಡಿಯಲ್ಲಿ ಇಲ್ಲದಿರುವುದನ್ನು ಮಾಧ್ಯಮ ಪ್ರತಿನಿಧಿಗಳು ಪ್ರಶ್ನಿಸಿದಾಗ ತಿಮ್ಮಪ್ಪನವರು ತಾವೂ ಲೋಹಿಯಾ ಜಯಪ್ರಕಾಶ ನಾರಾಯಣ ಅವರ ಸಮಾಜವಾದಿ ಸಿದ್ಧಾಂತವನ್ನು ನಂಬಿಕೊಂಡು ಹೋರಾಟ ನಡೆಸುತ್ತಲೇ ಬಂದವರು,

ಭಾವಚಿತ್ರ ಹಾಕುವ ಹುಚ್ಚುತನಕ್ಕೆ ಹೋಗಿಲ್ಲ ಎಂದು ಪ್ರತಿಕ್ರಿಯೆ ನೀಡಿದ್ದಾರೆ.ಇದರಿಂದ ತಿಮ್ಮಪ್ಪನವರಿಗೆ ಬಸವಣ್ಣನವರ ಬಗ್ಗೆ ಸಾಮಾನ್ಯ ಅಧ್ಯಯನವೂ ಇಲ್ಲ ಎಂಬುದು ಸ್ಪಷ್ಟವಾಗುತ್ತದೆ.

ಬಸವಣ್ಣನವರು ಜಗತ್ತಿನ ಮೊಟ್ಟಮೊದಲ ಸಮಾಜವಾದಿ, ಸಮಾನತೆಯ ಹರಿಕಾರ. ಅವರು ತಂದಂತಹ ಸಾಮಾಜಿಕ ಪರಿವರ್ತನೆ, ಸಮಾನತೆಯನ್ನು ಇವರು ಯಾರು ತಂದಿದ್ದಾರೆ.ಬವಸಣ್ಣನವರು ಹುಟ್ಟು ಹೋರಾಟಗಾರರು. 12ನೇ ಶತಮಾನದಲ್ಲೇ ಪಟ್ಟಭದ್ರ ವ್ಯವಸ್ಥೆ ಮತ್ತು ಸಂಪ್ರದಾಯಗಳಿಗೆ ಇದಿರೇಟು ಕೊಟ್ಟವರು. ಅಂದಾಗ ಸಚಿವರು ನಿಜವಾದ ಸಮಾಜವಾದಿಯೂ,ಹೋರಾಟಗಾರರೂ ಆಗಿದ್ದರೆ ಮೊಟ್ಟ ಮೊದಲು ಬಸವಣ್ಣನವರ ಭಾವಚಿತ್ರ ಹಾಕಿಕೊಳ್ಳಬೇಕೆಂದು ಸೂಚಿಸುತ್ತೇವೆ.

ವೀರ ಲಿಂಗಾಯತ ರಾಯರೆಡ್ಡಿಯವರ ಹಾಸ್ಯಾಸ್ಪದ ಸಂಯೋಜನೆ

ವೀರಶೈವ ಲಿಂಗಾಯತ ಎಂಬ ಪ್ರಯೋಗದಲ್ಲಿ ಅನೇಕರು ಶೈವ ಪದವನ್ನು ಇಷ್ಟಪಡುವುದಿಲ್ಲ. ಆದ್ದರಿಂದ ಶೈವ ಪದ ತೆಗೆದು ವೀರ ಲಿಂಗಾಯತ ಎಂದು ಮಾಡಿ ಸ್ವತಂತ್ರ ಧರ್ಮದ ಮಾನ್ಯತೆಗೆ ಯತ್ನಿಸಬೇಕು ಎಂಬ ವಿಲಕ್ಷಣ ಸಲಹೆಯನ್ನು ಸಚಿವ ಬಸವರಾಯ ರಾಯರೆಡ್ಡಿ ನೀಡಿದ್ದಾರೆ.

ಬಸವರಾಜ ರಾಯರೆಡ್ಡಿಯವರಿಗೆ ಸಮಸ್ಯೆಯೇ ಅರ್ಥವಾಗಿಲ್ಲ.ಕರ್ನಾಟಕದಲ್ಲಿ ಪ್ರಧಾನವಾಗಿ, ಮಹಾರಾಷ್ಟ್ರ,ತೆಲಂಗಾಣ, ಆಂಧ್ರಗಳಲ್ಲಿ ಸಾಕಷ್ಟು ಸಂಖ್ಯೆಯಲ್ಲಿ, ತಮಿಳುನಾಡು, ದೆಹಲಿ, ವಿದೇಶಗಳಲ್ಲಿ ಚದುರಿದಂತೆ ಇರುವ ಸಮಾಜ ಲಿಂಗಾಯತ ಎನ್ನಿಸಿಕೊಂಡಿದೆ. ಇವರು ಅನುಸರಿಸುವ ಲಿಂಗಾಯತ ಧರ್ಮಕ್ಕೆ ಜೈನ,ಬೌದ್ದ,ಸಿಖ್ ಧರ್ಮಗಳಂತೆ ಸ್ವತಂತ್ರ ಧರ್ಮದ ಸಾಂವಿಧಾನಿಕ ಮಾನ್ಯತೆ ಮತ್ತು ಧಾರ್ಮಿಕ ಅಲ್ಪ ಸಂಖ್ಯಾತರ ಸ್ಥಾನಮಾನ ಸೌಲಭ್ಯ ಕೊಡಿ ಎಂಬುದು ಈಗಿನ ಹೋರಾಟದ ಗುರಿ, ಈ ಧರ್ಮ ಸ್ಥಾಪನೆಯಾಗಿ 900 ವರ್ಷಗಳಾಗಿವೆ.ಇದು ವೀರಶೈವ ಲಿಂಗಾಯತವೂ ಅಲ್ಲ, ವೀರ ಲಿಂಗಾಯತವೂ ಅಲ್ಲ,ಕೇವಲ ಲಿಂಗಾಯತ ಮಾತ್ರ, ಆದ್ದರಿಂದ ಹೊಸ ಶಬ್ದಗಳ ಪ್ರಯೋಗ ಸಮಂಜಸವಲ್ಲ.

ಬಿ.ಆರ್.ಪಾಟೀಲರ ಆಕ್ಷೇಪಕ್ಕೆ ಉತ್ತರ

ಲಿಂಗಾಯತ ಮತ್ತು ವೀರಶೈವದ ಮಧ್ಯೆ ಒಮ್ಮತ ರೂಪಿಸಲು ತಜ್ಞರ ಸಮಿತಿ ರಚಿಸಲು ನಾನು ಆಕ್ಷೇಪಿಸಿದಕ್ಕೆ ಶಾಸಕರಾದ ಬಿ.ಆರ್.ಪಾಟೀಲ ಅಸಮಾಧಾನ ವ್ಯಕ್ತ ಪಡಿಸಿದ್ದಾರೆ.

ಬಿ.ಆರ್.ಪಾಟೀಲ, ಸಚಿವ ವಿನಯ ಕುಲಕರ್ಣಿ,ಎಂ.ಬಿ.ಪಾಟೀಲರ ದೃಢ ನಿಲುವಿನ ಬಗ್ಗೆ ನಮಗೆ ಯಾವುದೇ ಸಂದೇಹವಿಲ್ಲ. ಆದರೆ ವೀರಶೈವ ಮಹಾಸಭೆಯ ನಿಯಮಾವಳಿಗಳೇ ಬಸವ ತತ್ತ್ವಕ್ಕೆ ವಿರುದ್ದವಾಗಿರುವುದರಿಂದ ಮಹಾಸಭೆಯ ಅಧ್ಯಕ್ಷರಾಗಲೀ, ಪದಾಧಿಕಾರಿಗಳಾಗಲೀ ಲಿಂಗಾಯತ ಪದಕ್ಕೆ ಬದ್ಧರಾಗಬಹುದೆಂದು

ನಂಬಲು ಸಾಧ್ಯವೆ ? ಈಗ ಯಾವ ಹೊಸ ನಿರ್ಣಯಗಳು ಬೇಕಾಗಿಲ್ಲ, ಹೋರಾಟವೊಂದೇ ಗುರಿಯಾಗಬೇಕು. ಶ್ಯಾಮನೂರು ಶಿವಶಂಕರಪ್ಪ ಶರಣ ಪರಂಪರೆಯ ಸಿರಿಗೆರೆ ಮಠದ ಸಂಪ್ರದಾಯದವರು, ಈಶ್ವರ ಖಂಡ್ರೆ ಮನೆತನ ಶರಣ ಸಂಪ್ರದಾಯದು, ಇದನ್ನು ಮರೆತು ಅವರುಗಳು ಮಹಾಸಭೆಯ ಪದಾಧಿಕಾರಿಗಳಾಗಿರುವುದರಿಂದ ವೀರಶೈವ ಪದಕ್ಕಾಗಿ ಶತಪ್ರಯತ್ನ ಮಾಡುತ್ತಿರುವುದು ನಿಜಕ್ಕೂ ವಿಷಾದನೀಯ. ಮಹಾಸಭೆಯ ಹುದ್ದೆಗಳಿಗೆ ರಾಜೀನಾಮೆ ಕೊಟ್ಟು ಹೊರಬಂದು ಲಿಂಗಾಯತ ಧರ್ಮದ ಮಾನ್ಯತೆಗಾಗಿ, ಸಮಾಜದ ಹಿತದೃಷ್ಟಿಯಿಂದ ಪ್ರಯತ್ನಿಸಲಿ ಎಂಬುದು ನಮ್ಮ ಆಶಯ. ಇನ್ನಾವ ಸಮಿತಿಯಾಗಲಿ, ಹೊಸ ನಿರ್ಣಯವಾಗಲಿ ಅವಶ್ಯಕತೆ ಇಲ್ಲ.

ಸಿದ್ದಗಂಗಾ ಶ್ರೀಗಳನ್ನು ವಿವಾದಕ್ಕೆ ತರುತ್ತಿರುವುದು ವೀರಶೈವ ಮಹಾಸಭೆ

ವೀರಶೈವ ಮಹಾಸಭೆ 38 ವರ್ಷಗಳಿಂದ ವೀರಶೈವ-ಲಿಂಗಾಯತ ಧರ್ಮಕ್ಕೆ ಪ್ರತ್ಯೇಕ ಧರ್ಮದ ಸ್ಥಾನಮಾನಕ್ಕಾಗಿ ಪ್ರಯತ್ನ ಮಾಡುತ್ತಿದೆ. ವೀರಶೈವ ಮತ್ತು ಲಿಂಗಾಯತ ಎರಡು ಒಂದೇ ಎಂದು ಅಖಿಲ ಭಾರತ ವೀರಶೈವ ಮಹಾಸಭೆಯ ಪ್ರಧಾನ ಕಾರ್ಯದರ್ಶಿ ಸಚಿವ ಈಶ್ವರ ಖಂಡ್ರೆ ಪುನ: ಹೇಳಿದ್ದಾರೆ.38 ವರ್ಷವಿರಲಿ, ಮೂರು ನೂರು ವರ್ಷ ಪ್ರಯತ್ನಿಸಿದರೂ ವೀರಶೈವ ಪದವನ್ನು ಇಟ್ಟುಕೊಂಡರೆ ಸ್ವತಂತ್ರ ಧರ್ಮದ ಸ್ಥಾನಮಾನ ಸಿಗಲು ಸಾಧ್ಯವಿಲ್ಲ ಎಂಬುದನ್ನು ಅರ್ಥಮಾಡಿಕೊಂಡು ಅಧ್ಯಕ್ಷರಾದ ಶ್ಯಾಮನೂರು ಶಿವಶಂಕ್ರಪ್ಪ, ಈಶ್ವರ ಖಂಡ್ರೆ ತಮ್ಮ ಹಠ ಬಿಟ್ಟು ಲಿಂಗಾಯತವು ಸ್ವತಂತ್ರ ಎಂಬ ನಿಲುವಿಗೆ ಬರಲು ಮನವಿ ಮಾಡುತ್ತೇವೆ.

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ್ ಪಾಟೀಲ್ ಅವರ ಅಭಿಪ್ರಾಯ ಏನೆಂಬುದು ನಮಗೆ ತಿಳಿದಿಲ್ಲ. ಆದರೆ ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗೊ.ರು.ಚನ್ನಬಸಪ್ಪನವರಿಗೆ ಬಸವಣ್ಣನವರ ಬಗ್ಗೆ ಅಭಿಮಾನವಿದೆಯಾದರೂ ಅವರು ಧರ್ಮಗುರು, ಲಿಂಗಾಯತ ಧರ್ಮ ಸಂಸ್ಥಾಪಕರು ಎಂಬುದನ್ನು ಒಪ್ಪುವುದಿಲ್ಲ ಎಂಬುದು ನಮಗೆ ಗೊತ್ತು. ಆದ್ದರಿಂದ ತಜ್ಞರ ಸಮಿತಿಯ ನಿರ್ಧಾರದಲ್ಲಿ ನಮಗೆ ಯಾರಿಗೂ ವಿಶ್ವಾಸವಿಲ್ಲ. ಸಮಾಜದ ಹಿತದೃಷ್ಟಿಯಿಂದ ವೀರಶೈವ ಮಹಾಸಭೆ ಲಿಂಗಾಯತ ಧರ್ಮ ಎಂಬ ಒಂದೇ ಪದಕ್ಕೆ ಬದ್ಧವಾಗಿ ಬರಲಿ ಇಲ್ಲದಿದ್ದರೆ ಅವರ ದಾರಿ ಅವರಿಗೆ ನಮ್ಮ ದಾರಿ ನಮಗೆ. ಯಾವ ಹೊಸ ನಿರ್ಣಯವೂ ಅಗತ್ಯವಿಲ್ಲ ಎಂದು ಸ್ಪಷ್ಟಪಡಿಸುತ್ತೆ.

ಸಿದ್ಧಗಂಗಾ ಶ್ರೀಗಳನ್ನು ಈ ವಿವಾದಕ್ಕೆ ತರುವುದು ಸರಿಯಲ್ಲ ಎಂದು ಈಶ್ವರ ಖಂಡ್ರೆಯವರು ಹೇಳಿದ್ದಾರೆ. ಶ್ರೀಗಳು ಎಂ.ಬಿ.ಪಾಟೀಲರ ಮುಂದೆ ತಮ್ಮ ಮನದಾಳದ ಅಭಿಪ್ರಾಯವನ್ನು ಹೇಳಿರುವ ವಿಷಯವನ್ನು ಪಾಟೀಲರು ಮಾಧ್ಯಮದ ಮುಂದೆ ಹೇಳಿದಾಗ

ಅವರ ಮೇಲೆ ಒತ್ತಡ ತಂದು ಕೃತಕ ಪತ್ರಗಳಿಗೆ ಸಹಿ ಪಡೆದು ವಿವಾದ ಎಬ್ಬಿಸುತ್ತಿರುವುದು ಬಿಜೆಪಿ ನಾಯಕರು ಮತ್ತು ವೀರಶೈವ ಮಹಾಸಭೆ.

ಪ್ರಭಾಕರ ಕೋರೆಯವರ ದ್ವಂದ್ವ ನಿಲುವಿಗೆ ಆಕ್ಷೇಪ : ಕೆ.ಎಲ್.ಇ ಸೊಸೈಟಿಯ ಅಧ್ಯಕ್ಷರಾದ ಪ್ರಭಾಕರ ಕೋರೆಯವರು ತಾವೂ ವೀರಶೈವ ಮಹಾಸಭೆಯ ಉಪಾಧ್ಯಕ್ಷರಾದ ಕಾರಣ ಮಹಾಸಭೆಯ ನಿರ್ಣಯಕ್ಕೆ ಬದ್ಧರಾಗುವುದಾಗಿ ಹೇಳಿದ್ದಾರೆ. ಇತ್ತೀಚಿಗೆ ಜುಲೈ ತಿಂಗಳಲ್ಲಿ ಮಹಾರಾಷ್ಟ್ರದ ಪೂನಾದಲ್ಲಿ ನಡೆದ ಲಿಂಗಾಯತ ರ್ಯಾಲಿಯಲ್ಲಿ ಭಾಗವಹಿಸಿ, ಇದೀಗ ವಿರುದ್ಧವಾಗಿ ಹೇಳಿಕೆ ನೀಡುತ್ತ ದ್ವಂದ್ವ ನಿಲುವು ಅವರು ಪ್ರದರ್ಶಿಸುತ್ತಿರುವುದು ಖಂಡನೀಯ

ಕರ್ನಾಟಕದ ಮಠಾಧಿಪತಿಗಳು ಯಾರನ್ನೂ ಈ ಹೋರಾಟದಲ್ಲಿ ತೆಗೆದುಕೊಳ್ಳ ಬೇಡಿ ಎಂದು ಅಂದು ಕರೆ ಕೊಟ್ಟರು. ಆದರೆ ಇಂದು ಮಠಾಧಿಪತಿಗಳು ಒಗ್ಗಟ್ಟಾಗಿ ಈ ಚಳುವಳಿಯಲ್ಲಿ ಭಾಗವಹಿಸುತ್ತಿದ್ದಾರೆ ಎಂದು ಹೇಳಲು ಹೆಮ್ಮೆ ಎನಿಸುತ್ತಿದೆ.

ಸದಾಶಿವ ಸ್ವಾಮೀಜಿಗೆ ಮಾರುತ್ತರ : ಸೇಡಂದಲ್ಲಿ ನಡೆದ ಒಂದು ಸಭೆಯಲ್ಲಿ ಕೊತ್ತಲ ಬಸವೇಶ್ವರ ದೇವಸ್ಥಾನದ ಸದಾಶಿವ ಸ್ವಾಮೀಜಿ ಮಾತನಾಡುತ್ತ ಕಲಬುರ್ಗಿಯಲ್ಲಿ ಇದೇ 24 ರಂದು ನಡೆಯುವ ರ್ಯಾಲಿಯಲ್ಲಿ ಯಾರು ಭಾಗವಹಿಸುತ್ತಾರೆ ಎಂಬುದನ್ನು ಗಮನಿಸಿ ಅವರ ಮನೆಯಲ್ಲಿ ನಡೆಯುವ ಹುಟ್ಟು-ಸಾವು ಯಾವುದರಲ್ಲೂ ಭಾಗವಹಿಸ ಬಾರದೆಂದು ವೀರಶೈವ ಪುರೋಹಿತರಿಗೆ ಕರೆ ಕೊಟ್ಟಿದ್ದಾರೆ. ಇಂಥ ಬೆದರಿಕೆಗೆ ಸಮಾಜದ ಜನರು ಹೆದರಬಾರದೆಂದು ಸೂಚಿಸುತ್ತೇವೆ.

ಜಂಗಮತ್ವ ಹುಟ್ಟಿನಿಂದ ಬರದು, ಅರ್ಹತೆಯಿಂದ ಬರುತ್ತದೆ ರಾಷ್ಟ್ರೀಯ ಬಸವ ದಳದವರು ಸಾಕಷ್ಟು ಜನ ಶರಣ ಶರಣೆಯರು ಪೂಜಾ ವಿಧಿವಿಧಾನ ಮಾಡಿಸುವ ಕ್ರಿಯಾ ಮೂರ್ತಿಗಳಾಗಿ ತಯಾರಾಗಿದ್ದಾರೆ. ಜನರಿಗೂ ನಾವು ತರಬೇತಿ ಕೊಡಲು ವ್ಯವಸ್ಥೆ ಮಾಡಿದ್ದೇವೆ. ಆದ್ದರಿಂದ ಧೈರ್ಯವಾಗಿ ನೀವು ಪುರೋಹಿತಶಾಹಿ ಜನರನ್ನು ಎದುರಿಸಬೇಕೆಂದು ಸೂಚಿಸುತ್ತೇವೆ. ಅಂಥ ಸಂದಿಗ್ಧ ಸಮಯದಲ್ಲಿ ನಮಗೆ ದೂರವಾಣಿ ಕರೆ ಮಾಡಿರಿ ಕ್ರಿಯಾ ಮೂರ್ತಿಗಳನ್ನು ಕಳಿಸಿಕೊಡುತ್ತೇವೆ ಎಂದು ಹೇಳಿದರು.

ಬಸವಣ್ಣನವರೊಡನೆ ಯಾರನ್ನೂ ಹೋಲಿಸಬಾರದು

ಬೀದರದಲ್ಲಿ ನಡೆದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಮಾಜಿ ಸಚಿವ ಶ್ರೀರಾಮುಲು ಅತ್ಯುತ್ಸಾಹವನ್ನು ಪ್ರದರ್ಶಿಸುತ್ತ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪನವರನ್ನು 21ನೇ ಶತಮಾನದ ಬಸವಣ್ಣ ಎಂದು ಹೊಗಳಿದ್ದಾರೆ. ಇದನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

ದಿನಕ್ಕೊಂದು ದೇವಸ್ಥಾನವನ್ನು ಸುತ್ತುತ್ತ ಹೋಮ-ಹವನಗಳನ್ನು ಮಾಡುತ್ತ ಬಹುದೇವತೋಪಾಸಕರೂ, ಮೂಢನಂಬಿಕೆಯ ಆಗರವೂ ಆಗಿರುವ

ಯಡೆಯೂರಪ್ಪನವರನ್ನು ಕ್ರಾಂತಿಪುರುಷ,ಏಕದೇವೋಪಾಸನೆಯ ಪ್ರತಿಪಾದಕರಾದ ಬಸವಣ್ಣನವರಿಗೆ ಹೋಲಿಸುವುದು ಅತ್ಯಂತ ವಿಷಾದನೀಯ.

ಬಸವಣ್ಣನವರು ಯುಗಪುರುಷರು, ಈಗ ಭೂಮಿಯ ಮೇಲೆ ಬದುಕಿರುವ ಯಾರನ್ನೂ ಅವರಿಗೆ ಹೋಲಿಸಬಾರದೆಂದು ಮನವಿ ಮಾಡುತ್ತೇವೆ. ಬಹುಶ: ಯಡಿಯೂರಪ್ಪನವರೂ ಇಂತಹ ಮುಖ ಸ್ತುತಿಯಿಂದ ಮುಜುಗರಕ್ಕೆ ಒಳಗಾಗಿರಬೇಕೆಂದು ಭಾವಿಸುತ್ತೇವೆ. ಅವರ ಚಿಂತನೆಗಳ ಕಾರಣಕ್ಕೆ ಬಸವಣ್ಣನವರು ಕಾರಣ ಎಂದು ಹೇಳಲಿ ಆದರೆ ಬಸವಣ್ಣನವರಿಗೆ ಅವರನ್ನು ಹೋಲಿಸಬಾರದು.

*****

ಕೆಲವು ಸ್ಮರಣೀಯ ಸಂದರ್ಭಗಳು

– ಮಾತಾಜಿ

1966 ರಲ್ಲಿ ಋಷಿಕೇಶದಲ್ಲಿ ಅನುಷ್ಠಾನ ಮುಗಿಸಿ ಪೂಜ್ಯ ಅಪ್ಪಾಜಿ, ನಾನು ನಮ್ಮ ಶಿಷ್ಯನೊಬ್ಬ ಟ್ರೇನಿನಲ್ಲಿ ಪ್ರಯಾಣಿಸುತ್ತ ಈಗಿನ ಆಂಧ್ರಪದೇಶದಲ್ಲಿ ಇರುವ ತಾಂಡೂರಿಗೆ ಶ್ರಾವಣ ಮಾಸದ ಪ್ರವಚನ ಮಾಡಲು ಬರುತ್ತಿದ್ದೆವು. ಆಗ ಒಬ್ಬ ಮಹಾತ್ಮರು ನಮ್ಮ ಎದುರಿನ ಆಸನದಲ್ಲಿ ಕುಳಿತುಕೊಂಡಿದ್ದು ನನ್ನನ್ನು ನೋಡಿ ಹೇಳಿದರು; "ನದಿಯ ದಂಡೆಯ ಮೇಲೆ ನಿಮ್ಮ ಒಂದು ಆಶ್ರಮವಾಗುತ್ತದೆ. ನೀನು ಕಾಲಿಟ್ಟಲ್ಲಿ ಒಂದು ಮಠವಾಗುತ್ತದೆ." ಎಂದು ಆ ಬಗ್ಗೆ ನನಗೆ ಏನೂ ಅನ್ನಿಸಿರಲಿಲ್ಲ. ಈಗ ಒಂದು ತಿಂಗಳಿನಿಂದ (14–08–2017 ರಿಂದ) ಆರೋಗ್ಯ ಸುಧಾರಣೆಗಾಗಿ ಕೂಡಲಸಂಗಮದಲ್ಲಿ ಇರುತ್ತಿದ್ದೇನೆ. ಬಸವ ಧರ್ಮದ ಮಹಾಜಗದ್ಗುರು ಪೀಠದ ಉತ್ತರಾಧಿಕಾರಿಗಳಲ್ಲಿ ಒಬ್ಬರಾದ ಪೂಜ್ಯ ಶ್ರೀ ಮಹಾದೇಶ್ವರ ಸ್ವಾಮಿಗಳು ಇತ್ತೀಚೆಗೆ ಸುಂದರವಾದ ಬಸವ ಭಾರತಿ ಪ್ರೌಢ ಶಾಲೆ ಮತ್ತು ಕಾಲೇಜ್ ಕಟ್ಟಡವನ್ನು ದಾನಿಗಳ ನೆರವಿನಿಂದ ಕಟ್ಟಿಸಿದ್ದು ಅದರಲ್ಲಿ ನನಗೆ ಉಳಿಯಲು ವ್ಯವಸ್ಥೆ ಮಾಡಿದ್ದಾರೆ. ನಾನಿರುವ ಕೋಣೆಯ ಕಿಟಕಿಯಿಂದ ನೋಡಿದಾಗ ಮಲಪ್ರಭಾ ನದಿಯು ಸುಂದರವಾಗಿ ಕಾಣುತ್ತಿದ್ದು, ಸಮೀಪದಲ್ಲೇ ಇರುವಂತೆ ತೋರುತ್ತದೆ. ಆಗ ನನಗೆ ಆ ಮಹಾತ್ಮರ ಮಾತು ತಟ್ಟನೆ ನೆನಪಿಗೆ ಬಂದಿತು. ಒಮ್ಮೆ ಪ್ರವಾಹ ಬಂದಾಗ ನದಿಯ ನೀರು ಮಠದ ಸಮೀಪದವರೆಗೆ ಬಂದಿತ್ತಂತೆ. ಈಗ ಬಸವ ಸಾಗರದ ಡ್ಯಾಂ ತೆರೆಯಲ್ಪಟ್ಟಿರುವುದರಿಂದ ಪ್ರವಾಹ ನಿಯಂತ್ರಿಸಲ್ಪಟ್ಟಿದೆ.

ಬೆಂಗಳೂರು ಇನ್ನು ಅವರ ಎರಡನೆಯ ಮಾತು; ನೀವು ಕಾಲಿಟ್ಟಲ್ಲಿ ಒಂದು ಮಠವಾಗುತ್ತದೆ ಎಂಬುದರ ಬಗ್ಗೆ ನಾನು ಆಲೋಚಿಸಿದೆ. ಅಹುದು, ಕೂಡಲಸಂಗಮ, ಬಸವ ಕಲ್ಯಾಣ, ಅಲ್ಲಮಗಿರಿ, ಧಾರವಾಡ ಮಾತ್ರವಲ್ಲ ವಿವಿಧ ಊರುಗಳಲ್ಲಿ ಬಸವ ಮಂಟಪಗಳು ಆಗಿವೆಯಲ್ಲವೇ? ಎಂದು ಅನ್ನಿಸಿತು.

ಬಸವ ಸಾಗರದ ಅದ್ಭುತ ಸೌಂದರ್ಯ

ಒಮ್ಮೆ ಕನ್ಯಾಕುಮಾರಿಗೆ ಹೋಗಿದ್ದೆವು. ಆಗ ಶ್ರೀ ವಿವೇಕಾನಂದ ಪುತ್ಥಳಿ ಇರುವ ಸ್ಥಳಕ್ಕೆ ದೋಣಿಯಲ್ಲಿ ಹೋಗಿದ್ದೆವು. ಎತ್ತರವಾದ ಆ ಸ್ಥಳದಲ್ಲಿ ನಿಂತು ಸಮುದ್ರದ ಸೌಂದರ್ಯ ವೀಕ್ಷಿಸುವಾಗ, "ನಮ್ಮ ಶರಣರ ಯಾವ ಸ್ಥಳವೂ ಸಮುದ್ರದ ದಂಡೆಯ ಮೇಲೆ ಇಲ್ಲವಲ್ಲ. ಹಾಗಿದ್ದರೆ ಎಷ್ಟು ಚೆಂದವಿತ್ತು" ಎಂಬ ಆಸೆ ಮೂಡಿ, ನಿರಾಶೆಯೂ ಉಂಟಾಯಿತು. ಆದರೆ ಈಗ ಮಳೆಯು ಧಾರಾಕಾರವಾಗಿ ಸುರಿದು ಕೃಷ್ಣಾ ಮತ್ತು ಮಲಪ್ರಭಾ ಎರಡೂ ತುಂಬಿ ಹರಿಯುತ್ತಿದ್ದು, ಗುರು ಬಸವಣ್ಣನವರ ಐಕ್ಯ ಮಂಟಪದ ಮೇಲೆ ನಿಂತು ನೋಡಿದಾಗ ಸಮುದ್ರದಂತೆಯೇ ಭಾಸವಾಗುತ್ತದೆ. ಅತ್ಯಂತ ರಮಣೀಯ ದೃಶ್ಯವಾಗಿದ್ದು, ಶರಣ ಬಂಧುಗಳು ಬಂದು ನೋಡಿ ಹರ್ಷಿಸಬೇಕೆಂದು ಸೂಚಿಸುತ್ತೇನೆ. ಈ ಪ್ರಸಂಗದಿಂದ ನನಗೆ ಅನ್ನಿಸುತ್ತದೆ– ಸತ್ ಸಂಕಲ್ಪ ಮಾಡಿಕೊಳ್ಳಬೇಕು; ಅಸಾಧ್ಯವೂ ಸಾಧ್ಯವಾಗುತ್ತದೆ ಎಂದು ಮನದಟ್ಟಾಗುತ್ತದೆ.

ಇದೀಗ ನಮ್ಮ ಶರಣ ಬಂಧುಗಳು ರ್‍ಯಾಲಿಗಳಲ್ಲಿ ಭಾಗವಹಿಸುವುದರ ಜೊತೆಗೆ ಪ್ರತಿನಿತ್ಯ ಪೂಜೆ ಮಾಡುವಾಗ "ಲಿಂಗಾಯತ ಧರ್ಮಕ್ಕೆ ಸ್ವತಂತ್ರ ಧರ್ಮದ ಸ್ಥಾನಮಾನ ಮತ್ತು ಸಮಾಜಕ್ಕೆ ಧಾರ್ಮಿಕ ಅಲ್ಪ ಸಂಖ್ಯಾತರ ಸೌಲಭ್ಯ ಸಿಗಲಿ" ಎಂದು ಸಂಕಲ್ಪ ಮಾಡಿರಿ. ಲಿಂಗದೇವನಲ್ಲಿ ಮತ್ತು ಧರ್ಮಗುರು ಬಸವಣ್ಣನವರಲ್ಲಿ ಬೇಡಿಕೊಳ್ಳಿರಿ.

ಕೂಡಲಸಂಗಮದ ಮಹಾಮನೆ ಮಹಾಮಠ

ಸಾಮಾನ್ಯವಾಗಿ ಬೆಂಗಳೂರಿನಲ್ಲೇ ನಾನು ಕೆಲಸ ಕಾರ್ಯಗಳಿಗಾಗಿ ಉಳಿಯುತ್ತಿದ್ದೆ. ಇತ್ತೀಚೆಗೆ ಅಲ್ಲಿಯ ಹವಾಮಾನ ಮತ್ತು ವಾತಾವರಣ ಕಲುಷಿತತೆ(ಪೊಲ್ಯುಶನ್) ಯಿಂದಾಗಿ ಆರೋಗ್ಯ ಸುಧಾರಿಸಿಕೊಳ್ಳಲು ಕೂಡಲಸಂಗಮಕ್ಕೆ ಬಂದೆ. ಇಲ್ಲಿಯ ಹವಾಮಾನ ಅತ್ಯಂತ ವಿಶೇಷ. ಮಹಾಮನೆ ಆವರಣದಲ್ಲಿ ಬಹಳಷ್ಟು ಮರ–ಗಿಡಗಳನ್ನು ಬೆಳೆಸಲಾಗಿದೆ. ಶುದ್ಧವಾದ ಹವೆಯಿಂದ ಶ್ವಾಸಕೋಶಗಳೆಲ್ಲ ಶುದ್ಧವಾಗುತ್ತದೆ. ನಾನಿರುವ ಕಟ್ಟಡದ ಸುತ್ತಲೂ ಜೋಳ, ತೊಗರಿ ಹಾಗೂ ತೆಂಗಿನ ಗಿಡಗಳನ್ನು ಬೆಳೆಸಲಾಗಿದೆ. ಮಲಪ್ರಭಾ ನದಿಯ ಮೇಲೆ ಹಾಯ್ದು, ಹೊಲದ ಬೆಳೆಗಳನ್ನು ದಾಟಿ ಬರುವ ತಂಗಾಳಿ ಅತ್ಯಂತ ಆಹ್ಲಾದಕರವೆನಿಸುತ್ತದೆ.

ಇದನ್ನೆಲ್ಲ ಆಸ್ವಾಧಿಸುವಾಗ ಇಲ್ಲೊಂದು 'ನಿಸರ್ಗ ಚಿಕಿತ್ಸಾ ಕೇಂದ್ರ' ಆದರೆ ಎಷ್ಟು ಚೆನ್ನಾಗಿರುತ್ತದೆ. ಎಷ್ಟೋ ಜನ ಬಂದು ತಮ್ಮ ದೈಹಿಕ ಮತ್ತು ಮಾನಸಿಕ ಕಾಯಿಲೆಗಳನ್ನು ಗುಣಪಡಿಸಿಕೊಳ್ಳಬಹುದಲ್ಲವೇ? ಎಂಬ ಆಸೆ ಮೂಡುತ್ತಿದೆ.

****

‘ಕರ್ಮಸಿದ್ಧಾಂತ, ಕಾಯಕಸಿದ್ಧಾಂತ ಬೇರೆ ಬೇರೆ’

(ಕೃಪೆ- ಪ್ರಜಾವಾಣಿ)

– ಡಾ. ಮೀನಾಕ್ಷಿ ಬಾಳೆ

> ವೇದಾದಿ ಸನಾತನಕ್ಕಿಂತ ವಚನಧರ್ಮವು ಬೇರೆಯಾಗಿದೆ. ಅಷ್ಟೇ ಅಲ್ಲ ಕರ್ಮಸಿದ್ಧಾಂತ ಅಪ್ಪಿಕೊಳ್ಳುವ ಸನಾತನ ಧರ್ಮವನ್ನು ಧಿಕ್ಕರಿಸಿಯೇ ಹೊಸ ಧರ್ಮವನ್ನು ಕಟ್ಟಿಕೊಳ್ಳಲಾಗಿದೆ.

‘ವಚನಧರ್ಮವು ಹಿಂದೂಧರ್ಮದ ಒಂದು ಶಾಖೆ. ಆದ್ದರಿಂದ ವಚನಾನುಯಿಗಳು ನಾವು ಹಿಂದೂಗಳಲ್ಲ ಎಂದು ಹೇಳಿಕೊಂಡರೆ ಅದು ತನ್ನ ತಾಯಿಯನ್ನೇ ನಿರಾಕರಿಸುವ ಕೃತಘ್ನತೆಯಾದೀತು’ ಎಂದು ‘ಹಿಂದೂ ಧರ್ಮಕ್ಕಿಂತ ವಚನಧರ್ಮ ಬೇರೆಯೇ? ಎಂಬ ತಮ್ಮ ಲೇಖನದಲ್ಲಿ (ಚರ್ಚೆ, ಸೆ.14) ಎಂ.ವಿ ನಾಡಕರ್ಣಿಯವರು ಹೇಳಿದ್ದಾರೆ. ಇದಕ್ಕೆ ಸ್ಪಷ್ಟವಾದ ಉತ್ತರವೆಂದರೆ ಅಲ್ಲಮನ ಈ ವಚನ.

ಅಜ್ಞಾನವೆಂಬ ತೊಟ್ಟಿಲೊಳಗೆ, ಜ್ಞಾನವೆಂಬ ಶಿಶುವ ಮಲಗಿಸಿ
ಸಕಲ ವೇದಶಾಸ್ತ್ರವೆಂಬ ನೇಣ ಕಟ್ಟಿ
ಹಿಡಿದು ತೂಗಿ ಜೋಗುಳ ಮಾಡುತ್ತಿದ್ದಾಳೆ
ಭ್ರಾಂತಿಯೆಂಬ ತಾಯಿ!
ತೊಟ್ಟಿಲು ಮುರಿದು ನೇಣ ಹರಿದು, ಜೋಗುಳ ನಿಂದಲ್ಲದೆ;
ಗುಹೇಶ್ವರನೆಂಬ ಲಿಂಗವ ಕಾಣಬಾರದು.

ಈ ದೇಶವು ಹಲವು ದೇಸಿ ಪರಂಪರೆಯ ಕಾಯಕ ನಿಷ್ಠ ಜನಾಂಗಗಳನ್ನು ಈ ವರ್ಣಾಶ್ರಮ ಧರ್ಮಗಳು ಹೇಗೆ ಭ್ರಾಂತಿಯಲ್ಲಿ ತೇಲಿಸಿಕೊಂಡು ಬರುತ್ತಿವೆ ಎಂಬುದನ್ನು ಈ ವಚನದಲ್ಲಿ ಅಲ್ಲಮಪ್ರಭು ಹೇಳಿದ್ದಾರೆ.

ಈ ಭ್ರಾಂತಿಯೆಂಬ ತಾಯಿ ಯಾವತ್ತೂ ದುಡಿಯುವ ಜನರ ದಾರ್ಶನಿಕ ಕಾಣ್ಕೆಗಳಿಗೆ ವಾತ್ಸಲ್ಯದ ಧಾರೆ ಹರಿಸಳು. ಆ ಕಾರಣಕ್ಕಾಗಿಯೇ ನಾವು ಕರ್ಮಠ ವೇದ ಶಾಸ್ತ್ರಗಳ ಪರಲು ಹರಿದುಕೊಂಡು ವೇದಜಡರ ತೊಟ್ಟಿಲ ಮುರಿದುಕೊಂಡು ಹೊರ ಬರಬೇಕಿದೆ. ಹೀಗೆ ಬಂದಾಗಲೇ ನಮ್ಮದೇ ಕಾಯಕ ಕೇಂದ್ರಿತ ದಾರ್ಶನಿಕತೆ ಕಟ್ಟಿಕೊಳ್ಳಲು ಸಾಧ್ಯ ಎಂದು ಹೇಳಿ ಅದನ್ನು ಕಟ್ಟಿಯೂ ತೋರಿಸಿದವರೇ ಬಸವ ಅಲ್ಲಮಾದಿ ವಚನಕಾರರು. ಇವರು ತುಂಬಾ ಸ್ಪಷ್ಟವಾಗಿಯೇ ನಾವು ವರ್ಣಾಶ್ರಮ ಧರ್ಮದ ಅನುಯಾಯಿಗಳಲ್ಲ ಎಂಬುದನ್ನು ತಾತ್ವಿಕವಾಗಿ ಪ್ರತಿಪಾದಿಸಿ ಯಜ್ಞ ಯಾಗ ಹೋಮ

ಹವನ ಪುರಾಣ ಶಾಸ್ತ್ರಗಳನ್ನು ಢಾಣಾಢಂಗುರವಾಗಿ ಖಂಡಿಸಿದ್ದಾರೆ. ಆದ್ದರಿಂದ ವೇದಾದಿ ಸನಾತನಕ್ಕಿಂತ (ಹಿಂದೂ ಧರ್ಮ) ವಚನಧರ್ಮ ಪೂರ್ಣ ಅಲ್ಲ ಕರ್ಮಸಿದ್ಧಾಂತ ಅಪ್ಪಿಕೊಳ್ಳಲು ಸನಾತನಧರ್ಮವನ್ನು ಧಿಕ್ಕರಿಸಿಯೇ ಹೊಸ ಧರ್ಮವನ್ನು ಕಟ್ಟಿಕೊಂಡಿದ್ದಾರೆ.

ಬಹು ಹಿಂದೆಯೇ ಸನಾತನಿಗಳನ್ನು ಧಿಕ್ಕರಿಸಿ ಬೌದ್ಧ, ಜೈನಧರ್ಮಗಳು ಅಸ್ತಿತ್ವ ಪಡೆದುಕೊಂಡಂತೆ ವಚನ ಧರ್ಮವೂ ದುಡಿಯುವ ಮತ್ತು ಅಪ್ಪಟ ಕನ್ನಡಿಗರ ಧರ್ಮವಾಗಿ ಅರಳಿದೆ. ಆದರೆ ಈ ದೇಶದ ಸನಾತನಿಗಳು ಹೀಗೆ ದಂಗೆ ಎದ್ದು ಹೊರಬಂದ ಧರ್ಮಗಳೆಲ್ಲವನ್ನೂ ಪೂರ್ವಪಕ್ಷವೆಂಬ ವಾಗದ್ವೈತದಡಿಯಲ್ಲಿ ತನ್ನೊಳಗು ಮಾಡಿಕೊಳ್ಳುವ ತಾತ್ವಿಕ ಕಸರತ್ತು ಡಿ.ಆರ್.ನಾಗರಾಜರು ಹೇಳಿರುವ ಈ ಮಾತುಗಳು ಪ್ರಸ್ತುತ. ‘20ನೇ ಶತಮಾನದ ಭಾರತೀಯ ತತ್ವಶಾಸ್ತ್ರವನ್ನು ಚಾರಿತ್ರಿಕ ಸಮೀಕ್ಷೆ ಎಂಬ ಕ್ರಮದಲ್ಲಿ ಬರೆಯುವಾಗ ಕೆಲಸ ಮಾಡುತ್ತಿರುವ ಒಂದು ಪ್ರಧಾನ ಸೈದ್ಧಾಂತಿಕ ಒತ್ತಡವೆಂದರೆ ಏಕೀಕೃತ ಭಾರತೀಯ ದರ್ಶನದ್ದು. ಹೀಗಾಗಿ ಎಲ್ಲ ಭಿನ್ನಸ್ವರಗಳನ್ನು, ಖಂಡಗಳನ್ನು, ಪ್ರತ್ಯೇಕ ಅಸ್ತಿತ್ವಗಳನ್ನು ಒಂದು ವಿಶಾಲ ಏಕೀಕೃತ ಚೌಕಟ್ಟಿನೊಳಗೆ ಅಡಗಿಸುವ ಪ್ರಯತ್ನ ಇಡೀ ಶತಮಾನದ ಪ್ರಮುಖ ಚಾರಿತ್ರಿಕ ಸಮೀಕ್ಷೆ ಹಾಗೂ ಸಂಗ್ರಹಗಳಲ್ಲಿ ಕಾಣುತ್ತೇವೆ. ಭಾರತೀಯ ತತ್ವಜ್ಞಾನದ ಬಗ್ಗೆ ಚಾರಿತ್ರಿಕವಾಗಿ ವ್ಯಾಖ್ಯಾನಿಸುವ ಎಲ್ಲ ಮಹತ್ವದ ಚಿಂತಕರಿಗೂ ಈ ಏಕೀಕಕರಣದ ಸೈದ್ಧಾಂತಿಕ ಹಟ ಪ್ರಜ್ಞಾಪೂರ್ವಕವಾಗಿಯೋ, ಅಪ್ರಜ್ಞಾಪೂರ್ವಕವಾಗಿಯೋ ಕಾಡಿದೆ. ರಾಷ್ಟ್ರೀಯವಾದದ ರಾಜಕೀಯ ಅಗತ್ಯಜ್ಞಾನವನ್ನು ಸಂಗ್ರಹಿಸುವಾಗಲೂ ಕೆಲಸ ಮಾಡಿದೆ’ (ಅಲ್ಲಮಪ್ರಭು ಮತ್ತು ಶೈವಪ್ರತಿಭೆ; 12 ಪುಟ) ಎಂದು ಹೇಳಿದ್ದಾರೆ. ಇದೇ ಹಳೆಯ ಜಾಡಿನಲ್ಲಿಯೇ ನಾಡಕರ್ಣಿಯವರು ವಚನ ಸಿದ್ಧಾಂತವನ್ನು ಸನಾತನ ವೈದಿಕ ವರ್ಣಾಶ್ರಮ ಧರ್ಮದೊಂದಿಗೆ ಸಮೀಕರಿಸುವ ಪ್ರಯತ್ನ ಮಾಡಿದ್ದಾರೆ. ಅವೈದಿಕ ಚಿಂತನಧಾರೆಯೊಂದು ಮೂರ್ತ ನೆಲೆಯಲ್ಲಿ ತನ್ನ ಅಸ್ತಿತ್ವವನ್ನು ಸಾರಲೆಂದು ತಾತ್ವಿಕವಾಗಿ ದಂಗೆ ಎದ್ದಾಗಲೆಲ್ಲ ವೈದಿಕ ವಿದ್ವಾಂಸರು ಅದನ್ನು ತಾಕಿಕ ನೆಲೆಯಲ್ಲಿ ಒಪ್ಪಗೊಳಿಸುವ (ಪೊಲಿಟಿಕಲಿ ರೈಟ್) ಕಸರತ್ತು ಮಾಡುತ್ತಲೇ ಇರುತ್ತಾರೆ. ಆದ್ದರಿಂದಲೇ ಲೇಖಕರು, ‘ಇಂದಿನ ಲಿಂಗಾಯತ ಸಮಾಜದಲ್ಲಿ ಜನರು, ವಚನಗಳಲ್ಲಿ ಹೇಳಿದ ಪ್ರಕಾರವೇ ನಡೆಯುತ್ತಾರೆ ಎಂದು ಯಾವ ಧೈರ್ಯದಿಂದ ಹೇಳಬಹುದು?’ ಎಂದು ತೀರ ಮೂರ್ತಕ್ಕೆ ಇಳಿದು ಟೀಕಿಸುತ್ತಾರೆ. ಸಮಸ್ಯೆ ಇರುವುದೇ ಇಲ್ಲಿ. ನಾಡಕರ್ಣಿಯವರು ದಿಕ್ಕು ತಪ್ಪಿದ ಜಾತಿವಾದಿ ಲಿಂಗಾಯತರನ್ನು ವಚನಸಿದ್ಧಾಂತದ ವಾರಸುದಾರರು ಎಂದು ಭಾವಿಸಿ ಅವರನ್ನು ವೈದಿಕ ಕರ್ಮಠರೊಂದಿಗೆ ತುಲನೆ ಮಾಡಿ ವಾದ ಮಂಡಿಸುತ್ತಾರೆ. ಆದರೆ, ವರ್ಣಾಶ್ರಮ ಧರ್ಮದಂತೆ ವಚನ ಧರ್ಮವು ಹುಟ್ಟಿನಿಂದ ನಿರ್ಧರಿತವಾದುದಲ್ಲ. ಆಚರಣೆಯಿಂದ ಯಾರೂ ಅದನ್ನು ಪಾಲಿಸ ಬಹುದಾಗಿದೆ. ಸನಾತನಮತದಂತೆ ಅದು ವಿಷ್ಣುವಿನ ಅಂಗಾಂಗಳಿಂದ ಉದ್ಭವವಾದುದಲ್ಲ. ಹಲವು ಕಾಯಕ ಜೀವಿಗಳು ಬಸವ, ಅಲ್ಲಮ, ಅಕ್ಕಮಹಾದೇವಿ,

ಸೂಳೆ ಸಂಕವ್ವೆಯಂಥ ಅಸಂಖ್ಯರ ಅನುಭಾವಿಕ ಅನುಸಂಧಾನದಲ್ಲಿ ಅದು ವೇದ ಪ್ರಮಾಣ ಧಿಕ್ಕರಿಸಿ ಅನುಭವ ಪ್ರಮಾಣವನ್ನು ಪುರಸ್ಕಿರಿಸುತ್ತದೆ.

ನಾಡಕರ್ಣಿಯವರು ಉದ್ದಕ್ಕೂ ಪ್ರತಿಪಾದಿಸಿದ್ದು ಉಪನಿಷತ್ತುಗಳ ಶುದ್ಧ ಆದರ್ಶೀಕೃತ ಮೌಲ್ಯಗಳನ್ನು. ಈ ಮೌಲ್ಯಗಳು ಉಪನಿಷತ್ತುಗಳು ಗುತ್ತಿಗೆ ಏನಲ್ಲ. ಈ ಬಗೆಯ ಅದರ್ಶವಾದಿ ಮೌಲ್ಯಗಳನ್ನು ಎಲ್ಲ ಅಪೌರುಷೇಯ ಅಥವಾ ಪ್ರವಾದಿ ಧರ್ಮಗಳಲ್ಲಿಯೂ ಅನೂಚಾನವಾಗಿ ಹೇಳಿಕೊಂಡು ಬರಲಾಗಿರುತ್ತದೆ. ವಚನಕಾರರು ಅನೇಕ ಶ್ಲೋಕಗಳನ್ನು ನೇರವಾಗಿ ಖಂಡಿಸಿದ್ದು ಇದೆ.

ಇನ್ನೊಂದಡೆ 'ಚಾತುರ್ವರ್ಣ್ಯಂ ಮಯಾ ಸೃಷ್ಯಂ ಗುಣಕರ್ಮ ವಿಭಾಗಶಃ' ಎಂಬಂಥ ಮತ್ತದೇ ಶ್ಲೋಕವನ್ನು ನಿದರ್ಶನವಾಗಿ ನೀಡಿ ವರ್ಣವ್ಯವಸ್ಥೆಯು ಗುಣ ಮತ್ತು ಮಾಡುವ ಕೆಲಸದ ಮೇಲೆಲ್ಲ ಅವಲಂಬಿಸಿದೆ ಎಂದು ಪೊಳ್ಳು ವಾದ ಮುಂದಿಡುತ್ತಾರೆ. ಆದರೆ ಅದೇ ಗೀತೆಯಲ್ಲಿ ಶೂದ್ರರು ಸ್ವಭಾವತಃ ಸೇವಕರ ಮನೋ ಗುಣ ಇರುವವರೆಂದು ಸ್ಪಷ್ಟ ಪಡಿಸಿದನ್ನು ಇವರು ತೇಲಿಸಿ ಬಿಡುತ್ತಾರೆ. ಗೀತೆಯಲ್ಲಿನ ಅಸಂಬದ್ಧತೆ, ಅತಾರ್ಕಿಕತೆಯನ್ನು ಈಗಾಗಲೇ ಹಲವು ವಿದ್ವಾಂಸರು ಬಟಾಬಯಲುಗೊಳಿಸಿದ್ದು ಇದೆ. ಆದರೆ ಇವರು ವಚನ ಸಿದ್ಧಾಂತ ನಖ ಶಿಖಾಂತವಾಗಿ ಖಂಡಿಸಿದ್ದ ವೇದೋಪನಿಷತ್ತುಗಳೊಂದಿಗೆ ಮತ್ತೆ ಅದನ್ನು ಸಮೀಕರಿಸುವ ಪ್ರಯತ್ನಕ್ಕೆ ಇಳಿಯುತ್ತಾರೆ. ಇದು ಸರಿ ಅಲ್ಲ. ಬಸವಾದಿಗಳು ತುಂಬಾ ಸ್ಪಷ್ಟವಾಗಿ ಹೇಳಿದ್ದಾರೆ.

ವೇದವನೋದಿದ ವಿಪ್ರರು ಹೊನಲಲ್ಲಿ ಹೋದ
ಕೇಡ ನೋಡಿರೆ! ಭರ್ಗೋ ದೇವಸ್ಯ ಧೀಮಹಿ ಎಂಬರು
ಒಬ್ಬರಿಗಾಗಿ ವಿಚಾರವಿಲ್ಲ ನೋಡಿರೇ
ಕೂಡಲ ಸಂಗಮದೇವ ಎನ್ನುತ್ತಾನೆ ಬಸವಣ್ಣ.

ಇದೇ ಅಭಿಪ್ರಾಯವನ್ನು ಅಲ್ಲಮಪ್ರಭು ಪುಷ್ಟಿಕರಿಸುತ್ತಾನೆ.

ವೇದವೊಂಬುದು ಓದಿನ ಮಾತು; ಶಾಸ್ತ್ರವೆಂಬುದು
ಸಂತೆಯ ಸುದ್ಧಿ
ಪುರಾಣವೆಂಬದು ಪುಂಡರ ಗೋಷ್ಠಿ, ತರ್ಕವೆಂಬುದು
ತಗರ ಹೋರಟೆ
ಭಕ್ತಿಯೆಂಬುದು ತೋರುಂಬ ಲಾಭ,
ಗುಹ್ಯೇರನೆಂಬದು ಮೀರದ ಘನವು!

ಹೀಗೆ ವೇದಾಗಮಗಳನ್ನು ನೇರವಾಗಿ ಖಂಡಿಸುವ ವಚನ ಸಿದ್ಧಾಂತವು ಸನಾತನಿಗಳೊಂದಿಗೆ ಎಲ್ಲಿಯೂ ರಾಜಿ ಮಾಡಿಕೊಂಡಿಲ್ಲ. ಕರ್ಮ ಸಿದ್ಧಾಂತವನ್ನು ಪ್ರತಪಾದಿಸುವ ಹಿಂದೂ ಧರ್ಮವು, ಕಾಯಕ ಸಿದ್ಧಾಂತದ ಮೇಲೆ ಕಟ್ಟಲಾದ ವಚನ ಧರ್ಮಕ್ಕೆ ತಾಯಿಯಾಗುವುದಿರಲಿ ಮಲತಾಯಿಯೂ ಆಗಲಾರದು.

****

ಧರ್ಮದ ವಿಚಾರದಲ್ಲಿ ಸುಪ್ರೀಂಕೋರ್ಟ್ ಅಭಿಮತ

'ಅತಿರೇಕಕ್ಕೆ ಕಡಿವಾಣ ಬೇಕು'

(ಕೃಪೆ– ಪ್ರಜಾವಾಣಿ)

ನವದೆಹಲಿ: 'ಸಮಾಜದಲ್ಲಿನ ವಿಭನ್ನ ದೃಷ್ಟಿಕೋಗಳಿಗೆ ಸಂಬಂಧಿಸಿದಂತೆ ಸಹಿಷ್ಣುತ ಅಗತ್ಯವಾಗಿದ್ದು, ಧಾರ್ಮಿಕ ವಿಷಯಗಳಲ್ಲಿ ಕಂಡುಬರುತ್ತಿವ ಅತಿರೇಕದ ವರ್ತನೆಗೆ ಕಡಿವಾಣ ಹಾಕಬೇಕಿದೆ' ಎಂದು ಸುಪ್ರೀಂ ಕೋರ್ಟ್ ಅಭಿಪ್ರಾಯಪಟ್ಟಿದೆ.

ಮಾತೆ ಮಹಾದೇವಿ ಅವರು ಸಂಪಾದಿಸಿರುವ 'ಬಸವ ವಚನ ದೀಪ್ತಿ' ಗ್ರಂಥವನ್ನು ನಿಷೇಧಿಸಿದ ರಾಜ್ಯ ಸರ್ಕಾರದ ಕ್ರಮವನ್ನು ಎತ್ತಿ ಹಿಡಿದಿರುವ ಹೈಕೋರ್ಟ್‌ನ 1998ರ ಆದೇಶ ಪ್ರಶ್ನಿಸಿ ಸಲ್ಲಿಸಿಲಾಗಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯ ಮೂರ್ತಿ ಎಸ್. ಎ. ಬೋಬಡೆ ಹಾಗೂ ಎಲ್. ನಾಗೇಶ್ವರವಾಸ್ ಅವರಿದ್ದ ದ್ವಿಸದಸ್ಯ ಪೀಠವ, 'ಒಂದು ನಿರ್ದಿಷ್ಟ ಗ್ರಂಥ ಓದುವುದರಿಂದ ಭಾವನೆಗಳಿಗೆ ಧಕ್ಕೆ ಉಂಟಾಗುತ್ತದೆ ಎಂದಾದಲ್ಲಿ ಅಂಥ ಗ್ರಂಥ ಓದುವುದನ್ನು ಬಿಡಿ' ಎಂದು ಸೂಚಿಸಿತು.

ಮಾತೆ ಮಹಾದೇವಿ ಅವರು ಲಿಂಗಾಯತ ಧರ್ಮ ಸಂಸ್ಥಾಪಕರಾದ ಬಸವಣ್ಣನವರ ವಚನಗಳಲ್ಲಿನ 'ಕೂಡಲ ಸಂಗಮದೇವ' ಎಂಬ ಅಂಕಿತನಾಮ ಬದಲಿಸಿ, 'ಲಿಂಗದೇವ' ಎಂಬ ಅಂಕಿತನಾಮ ಸೇರಿಸಿರುವುದು ಲಿಂಗಾಯತ ಸಮುದಾಯದ ಲಿಂಗಾಯತ ಸಮುದಾಯದ ಭಾವನೆಗಳಿಗೆಧಕ್ಕೆ ಉಂಟುಮಾಡುವ ಸಾಧ್ಯತೆ ಇದೆ ಎಂದು ವೀರಶೈವ ಮಹಾಸಭಾದ ಪರ ವಕೀಲರದ ಆರ್.ಬಸಂತ್ ಹಾಗೂ ನಿಶಾಂತ್ ಪಾಟೀಲ ವಾದಿಸಿದರು.

'ವಚನಗಳು ಲಿಂಗಾಯತ ಧರ್ಮದ ಬುನಾದಿಯಾಗಿದೆ. ಅವು ಭಗವದ್ಗೀತೆ, ಬೈಬಲ್ ಮತ್ತು ಕುರಾನ್‌ನಷ್ಟೇ ಮಹತ್ವ ಪಡೆದಿದೆ. ಆ ಸಮುದಾಯದೊಂದಿಗೆ ಹಾಸುಹೊಕ್ಕಾಗಿರುವ ಬಸವಣ್ಣನವರ ವಚನಗಳನ್ನು ಕದ್ದು, ತಿದ್ದಿ ಅಂಕಿತನಾಮ ಬದಲಿಸಲಾಗಿದೆ' ಎಂದು ದೂರಿದರು.

'ವಚನಗಳ ಅಂಕಿತನಾಮವನ್ನು ಬದಲಿಸಿ ಗ್ರಂಥ ಹೊರ ತಂದಿರುವುದು ಅವರ ಚಿತ್ರಣವಾಗಿದೆ. ಅಂತೆಯೇ ಅವರ ಅಭಿವ್ಯಕ್ತಿ ಸ್ವಾತಂತ್ರವನ್ನು ಪ್ರಶ್ನಿಸಲಾಗದು' ಎಂದು ಪೀಠ ತಿಳಿಸಿತು.

'ನಿಜವಾದ ಧರ್ಮವು ಲೌಕಿಕ ಚಿಂತನೆಯಿಂದ ಮುಕ್ತವಾಗಿಸಿ, ಅಲೌಕಿಕ ಚಿಂತನೆಯುತ್ತ ಸಾಗುವುದನ್ನು ಕಲಿಸುತ್ತದೆ. ಧರ್ಮದ ನಿಜವಾದ ಅನುಯಾಯಿಗಳು ಲೌಕಿಕ ವ್ಯವಹಾರಗಳ ಬಗ್ಗೆ ಚಿಂತಿಸದೆ, ಅಲೌಕಿಕತೆಯನ್ನು ಪಾಲಿಸಿದ್ದಾರೆ. ಧರ್ಮ ರಾಜಕಾರಣದಲ್ಲಿ ಪಾಲಿಸಿದ್ದಾರೆ. ಧರ್ಮ ರಾಜಕಾರಣದಲ್ಲಿ ಆಸಕ್ತಿ ಇರುವವರು ಮಾತ್ರ ಇಂತಹ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ' ಎಂದು ನ್ಯಾಯಪೀಠ ಹೇಳಿತು.

'ಸಮಾಜದಲ್ಲಿ ಎಲ್ಲ ಪ್ರಕಾರದ ದೃಷ್ಟಿಕೋನಗಳೂ ಇವೆ. ಎಲ್ಲವನ್ನೂ ಖಂಡಿಸುವ ಅಥವಾ ನಿರ್ಬಂಧಿಸುವ ಅಗತ್ಯವಿಲ್ಲ. ಆ ಲೇಖಕರ ದೃಷ್ಟಿಕೋನ ಬದಲಾಗಿದ್ದಲ್ಲಿ, ಆ ಗ್ರಂಥವನ್ನು ಓದಬೇಡಿ' ಎಂದು ತಿಳಿಸಿದ ನ್ಯಾಯಮೂರ್ತಿ ಬೋಬಡೆ, 'ವೀರಶೈವ, ಲಿಂಗಾಯತ ಸಮುದಾಯಗಳ ಪ್ರತ್ಯೇಕ ಧರ್ಮದ ಸ್ಥಾನಮಾನದ ಬೇಡಿಕೆಯ ಬಗ್ಗೆ ನಾವಿಲ್ಲಿ ಪ್ರಸ್ತಾಪಿಸುತ್ತಿಲ್ಲ. ಬದಲಿಗೆ, ಸಂವಿಧಾನದ 19 (1) (ಎ) ವಿಧಿಯ ಅಡಿ ಇರುವ ಅಭಿವ್ಯಕ್ತಿ ಸ್ವಾತಂತ್ರದ ರಕ್ಷಣೆಗೆ ಆಗಬೇಕಿದೆ. ಅಂಕಿತನಾಮ ಬದಲಿಸಿರುವ ಚಿಕ್ಕ ಬಲಾವಣೆಯು ಬಸವಣ್ಣನ ಅನುಯಾಯಿಗಳ ಭಾವನೆಗೆ ಧಕ್ಕೆ ತರಲಾರದು' ಎಂದರು.

ಈ ರೀತಿಯ ಬದಲಾವಣೆಯಿಂದ ಜನರ ಧಾರ್ಮಿಕ ಭಾವನೆಗೆ ಧಕ್ಕೆಯಾಗಿದೆಯೇ ಎಂಬುದನ್ನು ಪರಿಶೀಲಿಸಲಾಗುವುದು ಎಂದು ತಿಳಿಸಿದೆ.

ಬಸವ ವಚನ ದೀಪ್ತಿ ಕೋರ್ಟ್ ಆದೇಶಕ್ಕೆ ಮನ್ನಣೆ

– ಮಾತಾಜಿ

ವಿಶ್ವಗುರು ಬಸವಣ್ಣನವರ 800ನೆಯ ಲಿಂಗೈಕ್ಯ ಸಂಸ್ಮರಣೆಯ ನಿಮಿತ್ತ ಅವರ ವಚನಗಳ ಶುದ್ಧೀಕರಣಗೊಂಡ ಆವೃತ್ತಿಯಾಗಿ ಬಸವ ವಚನ ದೀಪ್ತಿ ಎಂಬ ಗ್ರಂಥವನ್ನು 1996ರಲ್ಲಿ ಪ್ರಕಟಿಸಲಾಯಿತು. ಗುರು ಬಸವಣ್ಣನವರ ಸಾಕ್ಷಾತ್ಕಾರದ ಮೊದಲು ಅವರು ಬರೆದ ವಚನಗಳಲ್ಲಿ 'ಕೂಡಲ ಸಂಗಮದೇವ' ಎಂಬ ವಚನಾಂಕಿತವನ್ನು ಹಾಗೆಯೇ ಇಟ್ಟು ಸಾಕ್ಷಾತ್ಕಾರದ ನಂತರದ ವಚನಗಳು ಸೃಷ್ಟಿಕರ್ತ ಪರಮಾತ್ಮನನ್ನು ಗುರುಬಸವಣ್ಣನವರು ಲಿಂಗದೇವ ಎಂದು ಸಂಬೋಧಿಸಿದ್ದರಿಂದ ಅವುಗಳಲ್ಲಿ 'ಲಿಂಗದೇವ' ಎಂಬ ವಚನಾಂಕಿತ ಬಳಸಲಾಯಿತು. ಕರ್ನಾಟಕ ಸರ್ಕಾರ ಈ ಕೃತಿಯನ್ನು ಮುಟ್ಟುಗೋಲು ಹಾಕಿದಾಗ ನಾವು ಉನ್ನತ ನ್ಯಾಯಾಲಯಕ್ಕೆ ಹೋದೆವು. ಸರ್ಕಾರದ ಕ್ರಮವನ್ನು ಹೈಕೋರ್ಟ್ ಎತ್ತಿ ಹಿಡಿದಾಗ ನಾವು ಸುಪ್ರೀಂಕೋರ್ಟ್‌ಗೆ ಹೋದೆವು. ಅದು ಸಹ ಕರ್ನಾಟಕ ಸರ್ಕಾರದ ಕ್ರಮವನ್ನು ಈಗ ಎತ್ತಿಹಿಡಿದಿದೆ. ಈಗ ನಾನು ಸಮಾಜಕ್ಕೆ ತಿಳಿಸುವುದೇನೆಂದರೆ ಮೊದಲನೆಯ ಆವೃತ್ತಿಯಾಗಿ 5000ಪುಸ್ತಕ ಪ್ರಕಟಿಸಿದೆವು. ಸರ್ಕಾರ ನಿಷೇಧಿಸುವುದಕ್ಕೆ ಮೊದಲೇ ಎಲ್ಲಾ ಪ್ರತಿಗಳು ಬಿಸಿ ದೋಸೆಯಂತೆ ಖರ್ಚಾದವು. ಸುಪ್ರೀಂ ಕೋರ್ಟ್ ತೀರ್ಪನ್ನು ಗೌರವಿಸುತ್ತೇವೆ. ಬಸವ ವಚನ ದೀಪ್ತಿ ಪುಸ್ತಕವನ್ನು ಮರು ಮುದ್ರಣ ಮಾಡುತ್ತಿಲ್ಲವೆಂದು ಪುಸ್ತಕದ ಸಂಪಾದಕರು, ಪ್ರಕಾಶಕರು ಆದ ಪೂಜ್ಯ ಶ್ರೀ ಮನ್ನಿರಂಜನ ಮಹಾಜಗದ್ಗುರು ಮಾತೆ ಮಹಾದೇವಿ ಸ್ಪಷ್ಟ ಪಡಿಸಿದರು.

"ಈ ಪ್ರಸಂಗದಿಂದ ನಿಮಗೆ ಹಿನ್ನಡೆಯಾಗಿದೆ..?" ಎಂಬ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಮಾತಾಜಿ, ಪುಸ್ತಕ 1996ರಲ್ಲಿ ಪ್ರಕಟವಾಗಿ ಈಗ 21 ವರ್ಷಗಳಾಗಿವೆ. ಅಂದಿನಿಂದ ಇಂದಿನವರೆಗೆ ನಮ್ಮ ಕಾರ್ಯಕ್ರಮಗಳು ನಿರಂತರವಾಗಿ ಸಾಗಿವೆ; ನಮ್ಮ ಸಂಸ್ಥೆಗಳು ಬೆಳೆಯುತ್ತಲೇ ಇವೆ. ನಮ್ಮ ಸಂಘಟನೆಯೂ ವಿಸ್ತಾರಗೊಳ್ಳುತ್ತಿದೆ. ಯಾವ ಹಿನ್ನಡೆಯೂ ಆಗುವುದಿಲ್ಲ ಎಂದು ಉತ್ತರಿಸಿದರು.

ಅಂಗವೆಂಬ ಭೂಮಿಯ ಮೇಲೆ

– ಬಸವ ಪ್ರಭು ಸ್ವಾಮೀಜಿ

ಸ್ಥೂಲ ಪಂಚಮಹಾಭೂತಗಳಲ್ಲಿ ಇಷ್ಟಲಿಂಗ ಪ್ರತಿಷ್ಠೆ
ಸೂಕ್ಷ್ಮ ಪಂಚಮಹಾಭೂತಗಳಲ್ಲಿ ಪ್ರಾಣಲಿಂಗ ಪ್ರತಿಷ್ಠೆ
ಕಾರಣ ಪಂಚಮಹಾಭೂತಗಳಲ್ಲಿ ತೃಪ್ತಿಲಿಂಗ ಪ್ರತಿಷ್ಠೆ
ಇಂತಿ ಸ್ಥೂಲ, ಸೂಕ್ಷ್ಮ, ಕಾರಣವು
ಮಹಾಕಾರಣದ ಮಹದ ಹೃದಯದಲ್ಲಿ ಕೊನೆದೋರಿದ
ಮಹಾ ಜ್ಯೋತಿಯು
ನಿಮ್ಮ ಶರಣರ ಅನುಭಾವದಲ್ಲಿದ್ದು ಕಾಣಬಹುದು ಲಿಂಗದೇವಾ (ಬ.ವ.ದೀ1411)

ಇಲ್ಲಿ ಸ್ಥೂಲ, ಸೂಕ್ಷ್ಮ, ಕಾರಣಗಳ ಬಗ್ಗೆ ಅಧ್ಯಯನ ಮಾಡಿದಾಗ, ಸ್ಥೂಲ ಅಂದರೆ ದೇಹಕ್ಕೆ ಸಂಬಂಧಪಟ್ಟಿದ್ದು. ಇಷ್ಟಲಿಂಗ ಪೂಜೆಗೆ ಯೋಗ್ಯವಾದದ್ದು. ಸೂಕ್ಷ್ಮ ಅಂದರೆ ಕಾಣದೆ ಇರುವ ಮತ್ತು ಎಲ್ಲದಕ್ಕೆ ಕಾರಣವಾಗಿರುವ ಮನಸ್ಸಿಗೆ ಸಂಬಂಧಪಟ್ಟಿದ್ದು ಇದು ಪ್ರಾಣಲಿಂಗ ಶಕ್ತಿಗೆ ಯೋಗ್ಯವಾದದ್ದು. ಕಾರಣ ಇದು ಮನಸ್ಸಿಗೆ, ಅಂಗಕ್ಕೆ ಸಂಬಂಧಿಸದೆ ಆನಂದ ತೃಪ್ತಿಗೆ ಸಂಬಂಧಪಟ್ಟಿದ್ದು. ಇದು ತೃಪ್ತಿಲಿಂಗ ಆನಂದಕ್ಕೆ ಯೋಗ್ಯವಾದದ್ದು. ನಾವು ಹಿಂದಿನ ಲೇಖನದಲ್ಲಿ ಮನಸ್ಸಿನ ಬಗ್ಗೆ ಚರ್ಚೆ ಮಾಡಿದ್ದೇವೆ. ಅದಕ್ಕೆ ಸಂಬಂಧಪಟ್ಟಂತೆ ಇಲ್ಲಿಯೂ ಇಂತಹ ಮನಸ್ಸು ಏನನ್ನು ಮಾಡಬಹುದು ಎಂಬುದನ್ನು ನೋಡುವುದಾದರೆ ಅದನ್ನೇ ಇಲ್ಲಿ ವಚನದಲ್ಲಿ ಸೂಕ್ಷ್ಮವೆಂದು ಕರೆಯುತ್ತಾರೆ.

ಮನಸ್ಸಿಗೆ ಯಾವುದೇ ಬಣ್ಣ, ರೂಪ, ಆಕಾರ, ಶಬ್ಧ, ಸ್ಪರ್ಶ, ರೂಪ, ರಸ, ಗಂಧ ಏನೂ ಇಲ್ಲ. ಆದರೆ ಎಲ್ಲವೂ ಇದ್ದು ಇಲ್ಲದಂತೆ ಕಾರ್ಯ ಮಾಡುತ್ತದೆ. ಯಾವುದಕ್ಕೆ ಶಬ್ಧ, ಸ್ಪರ್ಶ, ರೂಪ, ರಸ, ಗಂಧ ಇದೆಯೋ ಅದಕ್ಕೆ ಚೈತನ್ಯ ಕೊಡುವುದು ಈ ಮನಸ್ಸು. ಒಂದು ಉದಾಹರಣೆ ನೋಡುವುದಾದರೆ, ಒಂದು ಹೂವಿನ ಮೊಗ್ಗು ಅರಳಿಲ್ಲ ಅಂದ ಮಾತ್ರಕ್ಕೆ ನೀವು ಹೋಗಿ ಆ ಮೊಗ್ಗಿನ ಎಸಳನ್ನು ಕೈಯಿಂದ ಬಿಡಿಸಿದರೆ ಅರಳುತ್ತದೆ ಏನು? ಇಲ್ಲ. ಅಂದಾಗ ತನ್ನಷ್ಟಕ್ಕೆ ತಾನು ಮತ್ತು ತನ್ನೊಳಗಿರುವ ಪ್ರಾಣಶಕ್ತಿ ಪ್ರಚೋದಿಸಿದಾಗ ಮಾತ್ರ ತಾನಾಗಿಯೇ ಬಿಚ್ಚಿಕೊಂಡು ಅರಳಿ ಸುವಾಸನೆ ಕೊಡುತ್ತದೆ. ಇಂತಹ ಪ್ರಾಣ ಶಕ್ತಿಯೇ ಮನಸ್ಸು; ಇಂತಹ ಮನಸ್ಸು ನಮ್ಮಲ್ಲಿದೆ. ಆದರೆ ನಮ್ಮ ಕಣ್ಣಿಗೆ ಅದು ಕಾಣುವುದಿಲ್ಲ. ಆದರೆ ಆಶೆ, ವಿಚಾರ, ಆಲೋಚನೆ, ಸುಖ, ದು:ಖಕ್ಕೆಲ್ಲ ಈ ಮನಸ್ಸೇ ಕಾರಣವಾಗಿದೆ. ಇಡಿ ಜಗತ್ತನ್ನು ರೂಪಿಸುವುದು ಮನಸ್ಸು. ಷೇಕ್ಸಪಿಯರ್ ಹೇಳುವ ಪ್ರಕಾರ "ಒಳ್ಳೆಯದು ಕೆಟ್ಟದ್ದು ಎಲ್ಲಿದೆ. ಯಾವುದನ್ನು ಮನಸ್ಸು ಪ್ರೀತಿಸುತ್ತದೆಯೋ ಅದುವೇ ಒಳ್ಳೆಯದು. ಯಾವುದನ್ನು ಮನಸ್ಸು ದ್ವೇಷಿಸುತ್ತದೆಯೋ ಅದುವೇ ಕೆಟ್ಟದ್ದು" ಅಂದಾಗ ಮನಸ್ಸು, ಒಂದು ವಸ್ತುವಿನ ಬೆಲೆಯನ್ನು ಕಟ್ಟುತ್ತದೆ. ಮತ್ತೊಂದು ವಸ್ತುವಿನ ಬೆಲೆಯನ್ನು ಕುಗ್ಗಿಸುತ್ತದೆ. ಈ ರೀತಿಯಾಗಿ ಒಂದನ್ನು ಪ್ರೀತಿಸುವುದು ಒಂದನ್ನು ದ್ವೇಷಿಸುವುದನ್ನು ಮನಸ್ಸಿನ ಪ್ರಪಂಚವೆಂದು ಕರೆಯುತ್ತಾರೆ.

ಮನಸ್ಸು ಸತ್ವಪೂರ್ಣವಾಗಿರಬೇಕು. ಮನಸ್ಸನ್ನು ಬಳಸುವ ಕಲೆ ಕಲಿತುಕೊಳ್ಳಬೇಕು. ಹೇಗೆ ಬೇಕಾದರು ಹಾಗೆ ಬಳಸುವ ರೀತಿಯನ್ನು ಅರಿತುಕೊಳ್ಳಬೇಕು. ಜೀವನವೆಂಬ ಚಿತ್ರವನ್ನು ನೂರು ವರ್ಷ ಮನಸ್ಸೆಂಬ ಕುಂಚದಿಂದ ವಿಚಾರಗಳನ್ನು ತೆಗೆದುಕೊಂಡು ಬರೆಯಬೇಕು. ಕೆಲವೊಬ್ಬರು ಏನೇನೋ ಬರೆದುಕೊಳ್ಳಬೇಕು ಅನ್ನತ್ತಾರೆ. ಆದರೆ ಬರೆದುಕೊಳ್ಳುವಲ್ಲಿ ಎಡವಿರುತ್ತಾರೆ. ನಮ್ಮ ಜೀವನ ಚಿತ್ರವನ್ನು ನಾವೇ ಬರೆದುಕೊಳ್ಳಬೇಕು ಅಂತಹ ಚಿತ್ರ ಬರೆಯಲಿಕ್ಕೆ ನಿಸರ್ಗ ನಮಗೆ ಸ್ವಾತಂತ್ರ್ಯ ಕೊಟ್ಟಿದೆ. ಒಬ್ಬ ತತ್ವಜ್ಞಾನಿ ಹೇಳುತ್ತಾನೆ: 'ಜೀವನವೆಂದರೆ ಒಂದು ಸುಂದರವಾದ ಸ್ವಚ್ಛವಾದ ಪಾಟಿ ಇದ್ದಂತೆ.' ಹಾಗೆಯೆ ಜ್ಞಾನೇಂದ್ರಿಯಗಳಿಂದ (ಕಿವಿ, ಕಣ್ಣು, ನಾಲಿಗೆ, ಮೂಗು, ಚರ್ಮ) ಸಂದೇಶಗಳು ಬರುತ್ತವೆ ಅವುಗಳನ್ನು ಒಳ್ಳೆಯ ಮನಸ್ಸು ಎಂಬ ಪೆನ್ಸಿಲ್‌ನಿಂದ ಜೀವನವೆಂಬ ಪಾಟಿಯಲ್ಲಿ ಬರೆದುಕೊಳ್ಳಬೇಕು, ಹಾಗಂತ ಹೇಳಿ ಏನೇನೋ ಬರೆದುಕೊಳ್ಳಬಾರದು. ಯಾವುದನ್ನು ಬರೆದುಕೊಂಡರೆ ನಮ್ಮ ಜೀವನ ಸಾರ್ಥಕವಾಗುತ್ತದೆಯೋ ಅದನ್ನೇ ಬರೆದುಕೊಳ್ಳಬೇಕು. ಶರಣರ ಸತ್ಸಂಗ ಅನುಭಾವದ ಮಾತುಗಳನ್ನು ತುಂಬಿಕೊಂಡು ಪ್ರತಿ ಕ್ಷಣ ಕ್ಷಣಕ್ಕೂ ಒಳ್ಳೆಯದನ್ನೆ ಬರದುಕೊಳ್ಳಬೇಕು. ನಮ್ಮ ಜೀವನವೆಂಬ ಪಾಟಿಗೆ ನಾವೇ ಚಿತ್ರಕಾರರು ಎಂಬುದನ್ನು ಮರೆಯಬಾರದು. ಆದರೆ ಒಂದು ಮಾತು ನಾವು ಚಿತ್ರವನ್ನು ಬರೆಯಬೇಕಾದರೆ ಮೂಲ ಚಿತ್ರಕ್ಕೆ ಭಂಗ ತರಬಾರದು; ಬದಲಿಗೆ ಅದಕ್ಕೆ ಮೆರಗು ತರಬೇಕು. ಇದನ್ನು ರೂಪಿಸಬೇಕಾದರೆ ಮೊದಲು ಮನಸ್ಸನ್ನು ಸ್ವಚ್ಛ ಮಾಡಬೇಕು. ಅದಕ್ಕೆ ಶರಣರು ಹೇಳಿದ್ದು 'ಅಂಗವೇ ಭೂಮಿ' (ಸ್ಥೂಲಾಂಗ) ಎಂದು. ಇಂತಹ ಭೂಮಿಯಲ್ಲಿ ಮಹಾಜ್ಞಾನದ ವೃಕ್ಷ ಬೆಳೆಯಬೇಕು. ಶಾಂತಿಯುತವಾದ ಎಲ್ಲರಿಗೂ ಬೇಕಾದ ಮಾವಿನ ಮರವೆಂಬ ಶಾಂತಿ-ನೆಮ್ಮದಿಯ ಮರ ಬೆಳೆಯಬೇಕು. ಹಾಗಾದರೆ ಏನು ಮಾಡ ಬೇಕೆಂಬುದನ್ನು ಗುರು ಶಿಷ್ಯರ ಉದಾಹರಣೆಯೊಂದಿಗೆ ತಿಳಿದುಕೊಳ್ಳೋಣ.

ಒಂದು ದಿನ ಶಿಷ್ಯ, ಗುರುವಿಗಾಗಿ ಅರಣ್ಯದಲ್ಲಿ ಹುಡುಕುತ್ತಾ ಹೊರಟ. ಕೊನೆಗೆ ದೂರದ ಒಂದು ಕುಟೀರದಲ್ಲಿ ಒಬ್ಬ ಗುರುವಿರುವುದನ್ನು ಕಂಡು, ಅಲ್ಲಿಗೆ ಹೋಗಿ ದಣಿವಾರಿಸಿಕೊಂಡ. ಆ ಮೇಲೆ ಗುರುವಿಗೆ ಕೇಳುತ್ತಾನೆ. ಗುರುಗಳೆ ನನಗೆ ಜ್ಞಾನ ಕೊಡು ಎಂದು. ಆಗ ಗುರು ಸುಂದರವಾದಂತಹ ಒಂದು ಮಾತನ್ನು ಹೇಳುತ್ತಾರೆ. ನೀನು ನಿನ್ನ ಮನಸ್ಸಿನ ಹೊಲದಲ್ಲಿ ಬೆಳೆದಿರುವ ಅಸೂಯೆ, ಹಿಂಸೆ, ವಂಚನೆ ಎಂಬುವ ಕಸವನ್ನು ಕಿತ್ತುಹಾಕು. ಆಗ ಜ್ಞಾನ ಕೊಡಲು ಬರುತ್ತದೆ ಎಂದರು. ಅಸೂಯೆ, ಹಿಂಸೆ, ವಂಚನೆ ತುಂಬಿಕೊಂಡಾಗ ಜ್ಞಾನ ಕೊಡಲು ಹೇಗೆ ಸಾಧ್ಯ? ಇವುಗಳನ್ನು ತುಂಬಿಕೊಂಡ ದೇಹದಲ್ಲಿ ದೇವನು ನೆಲೆಸಲು ಅಸಾಧ್ಯದ ಮಾತು. ಹೊಲದಲ್ಲಿ ಎಲ್ಲಿಯವರೆಗೆ ಮುಳ್ಳು ಕಂಟಿ, ಹುಲ್ಲು, ಕಸ ತೆಗೆಯುದಿಲ್ಲವೋ ಅಲ್ಲಿಯವರೆಗೂ ನೀವೆಷ್ಟೆ ಬೀಜ ಹಾಕಿ ಬಿತ್ತಿದರೂ ಪೈರು ಬರುವುದಿಲ್ಲ. ಹಾಗೆಯೇ ಈ ಅಂಗವೆಂಬ ಭೂಮಿಯನ್ನು ನಾವು ಎಲ್ಲಿಯವರೆಗೆ ಸ್ವಚ್ಛಮಾಡಿಕೊಳ್ಳುವುದಿಲ್ಲವೋ ಅಲ್ಲಿಯವರೆಗೆ ಆಧ್ಯಾತ್ಮದ ಪೈರು ಬರಲು ಸಾಧ್ಯವಿಲ್ಲ.

****

ಓಂ ಶ್ರೀ ಗುರು ಬಸವ ಲಿಂಗಾಯ ನಮಃ

866666

ಧರ್ಮಕ್ಷೇತ್ರ ಕೂಡಲಸಂಗಮದಲ್ಲಿ 2018 ರ ಜನವರಿ 11, 12, 13, 14, 15ರಂದು ನಡೆಯಲಿರುವ 31ನೆಯ ಶರಣಮೇಳದ ಅಂಗವಾಗಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ ಅವರ

ಪ್ರಚಾರ ಪ್ರವಾಸ ಕಾರ್ಯಕ್ರಮ

ಆತ್ಮೀಯ ಶರಣ ಬಂಧುಗಳಿಗೆ, ಬಸವ ಸ್ಮರಣಪೂರ್ವಕ ಶುಭ ಹಾರೈಕೆಗಳು.

ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ ಬಸವಣ್ಣನವರ ಕೃಪೆಯಿಂದ ನಾವಿತ್ತ ಕ್ಷೇಮ. ನಿಮ್ಮ ಕ್ಷೇಮ ಹಾರೈಸುತ್ತೇವೆ. ಶರಣ ಬಂಧುಗಳ ಹಿಗ್ಗಿನ ಉತ್ಸವ, 2018ನೆಯ ಇಸವಿಯ ದಿ.11ರಿಂದ 15ರವರೆಗೆ ನಡೆಯುವ 31ನೆಯ ಶರಣ ಮೇಳದ ಪ್ರಚಾರಾರ್ಥ ಮತ್ತು ಸಂಘಟನೆ, ಸಂದರ್ಶನದ ದೃಷ್ಟಿಯಿಂದ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗ ತಮ್ಮ ಊರಿಗೆ ಅವರು ಆಗಮಿಸುವ ದಿನಾಂಕದ ವೇಳಾ ಪಟ್ಟಿಯನ್ನು ಕಳಿಸಲಾಗಿದೆ. ಈ ದಿನಾಂಕಕ್ಕೆ ಕಾರ್ಯಕ್ರಮ ಏರ್ಪಡಿಸುವ ಬಗ್ಗೆ ತಮ್ಮ ಸಾಧ್ಯಾ ಸಾಧ್ಯತೆಯನ್ನು ಬೇಗನೆ ನಮಗೆ ದೂರವಾಣಿಯ ಮೂಲಕ ಅಥವಾ ಪತ್ರ ಮುಖೇನ ತಿಳಿಸಬೇಕು. ಬೆಂಗಳೂರು ವಿಳಾಸಕ್ಕೆ ವ್ಯವಹರಿಸಬೇಕು. ಕಾರಣಾಂತರದಿಂದ ನಿಮಗೆ ಕಾರ್ಯಕ್ರಮ ಏರ್ಪಡಿಸಲು ಆಗದೆ ಇದ್ದರೆ ಅಥವಾ ಇನ್ನೂ ಹೆಚ್ಚುವರಿ ದಿನಾಂಕಗಳು ಬೇಕಾಗಿದ್ದರೆ ತಕ್ಷಣ ತಿಳಿಸಿರಿ.

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರು ಸಂದರ್ಶಿಸಲಿರುವ ಈ ಸಮಯವನ್ನು ಸಂಘಟನೆಗಾಗಿ ಬಳಸಿಕೊಳ್ಳುವುದೇ ಅಲ್ಲದೆ ದೀಕ್ಷಾ ಕಾರ್ಯಕ್ರಮಗಳನ್ನು ಏರ್ಪಡಿಸಲೂಬಹುದು. 2018ನೆಯ ಇಸವಿಯ 31ನೆಯ ಶರಣ ಮೇಳದ ಸರ್ವತೋಮುಖ ಯಶಸ್ಸಿಗೆ ತಾವು ಸಹಕರಿಸುವಿರಾಗಿ ನಂಬಿದ್ದೇವೆ.

ವಾಸ್ತವ್ಯ : ಬೆಂಗಳೂರು
03-09-2017

ಪೂಜ್ಯ ಶ್ರೀಮನ್ ನಿರಂಜನ
ಮಹಾ ಜಗದ್ಗುರು ಮಾತೆ ಮಹಾದೇವಿ
ಕಾರ್ಯಾಧ್ಯಕ್ಷೆ, ಶರಣ ಮೇಳ ಉತ್ಸವ ಸಮಿತಿ

ವಿ.ಸೂ : ಕಾರಣಾಂತರದಿಂದ ದಿನಾಂಕಗಳಲ್ಲಿ ಊರುಗಳಲ್ಲಿ ಬದಲಾವಣೆ ಆಗಬಹುದು. ಅದನ್ನು ತಿಳಿಸಲಾಗುವುದು.ಸ್ಥಳೀಯ ಕಾರಣದಿಂದ ಬದಲಾವಣೆ ಬೇಕಾಗಿದರೆ ತಕ್ಷಣವೇ ತಿಳಿಸಿರಿ.

ಸಂಪರ್ಕಿಸುವ ದೂರವಾಣಿ:

ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿ - 9611698230
ಪೂಜ್ಯ ಶ್ರೀ ಸದ್ಗುರು ಮಾತೆ ಬಸವರತ್ನಾದೇವಿ -9481741795

ಕ್ರ.ಸಂ.	ವಾರ	ದಿನಾಂಕ	ಊರಿನ ಹೆಸರು
01.	ಬುಧ(ಚನ್ನ)ವಾರ	01–11–2017	ವಿಜಯಪುರ
02.	ಗುರು(ಪ್ರಭು)ವಾರ	02–11–2017	ಬಸವ ಗಂಗೋತ್ರಿ
03.	ಶುಕ್ರ(ಮಾತೃ)ವಾರ	03–11–2017	ಮೈಸೂರು
04.	ಶನಿ(ಶರಣ)ವಾರ	04–11–2017	ಹಳ್ಳದಮಾದ ಹಳ್ಳಿ
05.	ಭಾನು(ದೇವ)ವಾರ	05–11–2017	ಚಿಕ್ಕಮಗಳೂರು
06.	ಸೋಮ(ಶಿವ)ವಾರ	06–11–2017	ಚಿಕ್ಕಮಗಳೂರು
07.	ಮಂಗಳ(ಬಸವ)ವಾರ	07–11–2017	ಚಿಕ್ಕಮಗಳೂರು
08.	ಬುಧ(ಚನ್ನ)ವಾರ	08–11–2017	ಶಿವಮೊಗ್ಗ
09	ಗುರು(ಪ್ರಭು)ವಾರ	09–11–2017	ಶಿವಮೊಗ್ಗ
10.	ಶುಕ್ರ(ಮಾತೃ)ವಾರ	10–11–2017	ಭದ್ರಾವತಿ
11.	ಶನಿ(ಶರಣ)ವಾರ	11–11–2017	ಭದ್ರಾವತಿ
12.	ಭಾನು(ದೇವ)ವಾರ	12–11–2017	ದಾವಣಗೆರೆ
13.	ಸೋಮ(ಶಿವ)ವಾರ	13–11–2017	ಚಿತ್ರದುರ್ಗ
14.	ಮಂಗಳ(ಬಸವ)ವಾರ	14–11–2017	ಚಳ್ಳಕೆರೆ
15.	ಬುಧ (ಚನ್ನ)ವಾರ	15–11–2017	ದೊಡ್ಡಉಳ್ಳಾರ್ತಿ
16.	ಗುರು(ಪ್ರಭು)ವಾರ	16–11–2017	ತೊರೆಸಿದ್ದಿಹಳ್ಳಿ
17.	ಶುಕ್ರ(ಮಾತೃ)ವಾರ	17–11–2017	ಕೆ.ಡಿ ಕೋಟೆ
18.	ಶನಿ(ಶರಣ)ವಾರ	18–11–2017	ಚಿತ್ರನಾಯಕನಹಳ್ಳಿ
19.	ಭಾನು(ದೇವ)ವಾರ	19–11–2017	ಘಟಪರ್ತಿ
20.	ಸೋಮ(ಶಿವ)ವಾರ	20–11–2017	ತಿಮ್ಮಪ್ಪಯ್ಯನಹಳ್ಳಿ
21.	ಮಂಗಳ(ಬಸವ)ವಾರ	21–11–2017	ಅಂದ್ರಾಳು
22.	ಬುಧ (ಚನ್ನ)ವಾರ	22–11–2017	ಬಳ್ಳಾರಿ
23.	ಗುರು (ಪ್ರಭು)ವಾರ	23–11–2017	ಬಳ್ಳಾರಿ
24.	ಶುಕ್ರ(ಮಾತೃ)ವಾರ	24–11–2017	ಸಿರುಗುಪ್ಪ
25.	ಶನಿ(ಶರಣ)ವಾರ	25–11–2017	ಗಂಗಾವತಿ
26.	ಭಾನು(ದೇವ)ವಾರ	26–11–2017	ಕೊಪ್ಪಳ

27.	ಸೋಮ(ಶಿವ)ವಾರ	27–11–2017	ಕೊಪ್ಪಳ
28.	ಮಂಗಳ(ಬಸವ)ವಾರ	28–11–2017	ಕೊಪ್ಪಳ
29.	ಬುಧ(ಚನ್ನ)ವಾರ	29–11–2017	ಶರಣ ಗ್ರಾಮ ಗುಳೇ
30.	ಗುರು(ಪ್ರಭು)ವಾರ	30–11–2017	ಹುಬ್ಬಳ್ಳಿ
31.	ಶುಕ್ರ(ಮಾತೃ)ವಾರ	01–12–2017	ಧಾರವಾಡ
32.	ಶನಿ(ಶರಣ)ವಾರ	02–12–2017	ಮುಮ್ಮಿಗಟ್ಟಿ
33.	ಭಾನು(ದೇವ)ವಾರ	03–12–2017	ಕಿತ್ತೂರು
34.	ಸೋಮ(ಶಿವ)ವಾರ	04–12–2017	ಕಿತ್ತೂರು ಸುತ್ತಮುತ್ತ
35.	ಮಂಗಳ(ಬಸವ)ವಾರ	05–12–2017	ಅಸುಂಡಿ
36.	ಬುಧ(ಚನ್ನ)ವಾರ	06–12–2017	ಬೈಲಹೊಂಗಲ
37.	ಗುರು(ಪ್ರಭು)ವಾರ	07–12–2017	ಬೈಲಹೊಂಗಲ
38.	ಶುಕ್ರ(ಮಾತೃ)ವಾರ	08–12–2017	ಬೆಳಗಾಂ
39.	ಶನಿ(ಶರಣ)ವಾರ	09–12–2017	ಬೆಳಗಾಂ
40.	ಭಾನು(ದೇವ)ವಾರ	10–12–2017	ಸಂಕೇಶ್ವರ
41.	ಸೋಮ(ಶಿವ)ವಾರ	11–12–2017	ಗಡಿಹಿಂಗ್ಲಾಜ್
42.	ಮಂಗಳ(ಬಸವ)ವಾರ	12–12–2017	ಗೋಕಾಕ್
43.	ಬುಧ(ಚನ್ನ)ವಾರ	13–12–2017	ಗೋಕಾಕ್
44.	ಗುರು(ಪ್ರಭು)ವಾರ	14–12–2017	ಗೋಕಾಕ್
45.	ಶುಕ್ರ(ಮಾತೃ)ವಾರ	15–12–2017	ಗೋಕಾಕ್
46.	ಶನಿ(ಶರಣ)ವಾರ	16–12–2017	ಶೇಗುಣಸಿ
47.	ಭಾನು(ದೇವ)ವಾರ	17–12–2017	ಖವಟಕೊಪ್ಪ
48.	ಸೋಮ(ಶಿವ)ವಾರ	18–12–2017	ತಾಂವಶಿ
49.	ಮಂಗಳ(ಬಸವ)ವಾರ	19–12–2017	ಅಥಣಿ
50.	ಬುಧ(ಚನ್ನ)ವಾರ	20–12–2017	ಕನಮಡಿ
51.	ಗುರು(ಪ್ರಭು)ವಾರ	21–12–2017	ಚಡಚಣ
52.	ಶುಕ್ರ(ಮಾತೃ)ವಾರ	22–12–2017	ವಿಜಯಪುರ
53.	ಶನಿ(ಶರಣ)ವಾರ	23–12–2017	ಮಾರ್ಕಬ್ಬಿನಹಳ್ಳಿ

54.	ಭಾನು(ದೇವ)ವಾರ	24-12-2017	ಗುಲಬರ್ಗಾ(ನೃಪತುಂಗನಗರ)
55.	ಸೋಮ(ಶಿವ)ವಾರ	25-12-2017	ಗುಲಬರ್ಗಾ(ಮಹಾಂತೇಶ)
56.	ಮಂಗಳ(ಬಸವ)ವಾರ	26-12-2017	ಉದಗೀರ್
57.	ಬುಧ(ಚನ್ನ)ವಾರ	27-12-2017	ಕಮಲನಗರ
58.	ಗುರು(ಪ್ರಭು)ವಾರ	28-12-2017	ಬೀದರ್
59.	ಶುಕ್ರ(ಮಾತೃ)ವಾರ	29-12-2017	ಜಹೀರಾಬಾದ್
60.	ಶನಿ(ಶರಣ)ವಾರ	30-12-2017	ಜಹೀರಾಬಾದ್
61.	ಭಾನು(ದೇವ)ವಾರ	31-12-2017	ಹೈದ್ರಾಬಾದ್
62.	ಸೋಮ(ಶಿವ)ವಾರ	01-01-2018	ಹೈದ್ರಾಬಾದ್
63.	ಮಂಗಳ(ಬಸವ)ವಾರ	02-01-2018	ಹೈದ್ರಾಬಾದ್
64.	ಬುಧ(ಚನ್ನ)ವಾರ	03-01-2018	ಹೈದ್ರಾಬಾದ್
65.	ಗುರು(ಪ್ರಭು)ವಾರ	04-01-2018	ಹೈದ್ರಾಬಾದ್
66	ಶುಕ್ರ(ಮಾತೃ)ವಾರ	05-01-2018	ಹೈದ್ರಾಬಾದ್
67.	ಶನಿ(ಶರಣ)ವಾರ	06-01-2018	ಹೈದ್ರಾಬಾದ್
68.	ಭಾನು(ದೇವ)ವಾರ	07-01-2018	ಹೈದ್ರಾಬಾದ್
69.	ಸೋಮ(ಶಿವ)ವಾರ	08-01-2018	ಹೈದ್ರಾಬಾದ್
70.	ಮಂಗಳ(ಬಸವ)ವಾರ	09-01-2018	ಹೈದ್ರಾಬಾದ್
71.	ಬುಧ(ಚನ್ನ)ವಾರ	10-01-2018	ಕೂಡಲ ಸಂಗಮಕ್ಕೆ ಪ್ರಯಾಣ

ಕಲ್ಯಾಣ ಕಿರಣ ಓದುಗರಿಗೆ ಸೂಚನೆ

ಚಂದಾ ಅವಧಿ ಮುಗಿದವರಿಗೆ ಸೂಚನೆ ಕಳಿಸಲಾಗುವುದು. ತಕ್ಷಣ ಹಣ ಕಳಿಸಿರಿ, ನವೀಕರಿಸಿರಿ. ನಿಮ್ಮ ಮೊಬೈಲ್ ಸಂಖ್ಯೆ ಮರೆಯದೆ ತಿಳಿಸಿರಿ.

ವಿ.ಸೂ: ಚಂದಾ ಕಳಿಸಲು ಅನುಕೂಲ ಇಲ್ಲದವರು ಫೋನ್ ಮೂಲಕ ಪತ್ರಿಕೆ ಕಳಿಸಲು ತಿಳಿಸಿರಿ. ಕಲ್ಯಾಣ ಪರ್ವದಲ್ಲಿ ಚಂದಾ ಹಣವನ್ನು ಪ್ರಾಮಾಣಿಕವಾಗಿ ಕಟ್ಟಿರಿ.

ಸಂಪರ್ಕಿಸುವ ದೂರವಾಣಿ: 9945806297

ಶರಣನ ಪ್ರಭಾವಲಯ

– ಶ್ರೀಕಾಂತ್ ವೈ.ಬಿ

ಪರಮಾತ್ಮನ ಈ ಸೃಷ್ಟಿಯಲ್ಲಿ ಎಲ್ಲವೂ ವಿಸ್ಮಯವೇ! ಅದರಲ್ಲೂ ಅನೇಕ ಭವಾಂತರಗಳನ್ನು ದಾಟಿ ಬಂದಿರುವ ಮಾನವ ನಿಜಕ್ಕೂ ವಿಸ್ಮಯವೇ!. ಈ ದೇಹವು ಕೊಳೆವ ಮಾಂಸದ ಮುದ್ದೆಯಲ್ಲ, ಇದೊಂದು ಪವಿತ್ರವಾದ ಸಾಧನ ಶರೀರ. ಇದೊಂದು ಶಕ್ತಿವಲಯ, ನಮ್ಮ ಸುತ್ತಲೂ ಒಂದು ವಿಸ್ಮಯವಾದ ಶಕ್ತಿ ತರಂಗಗಳಿಂದ ಆವೃತ್ತವಾದ ಅವ್ಯಕ್ತವಾದ ಒಂದು ಪರದೆ ಇದೆ. ಅನೇಕ ಮಹಾತ್ಮರ, ಸಂತರ, ಪವಿತ್ರಾತ್ಮರುಗಳ ಭಾವಚಿತ್ರಗಳನ್ನು ನೋಡಿರುತ್ತೇವೆ ಉದಾ: ಗುರು ಬಸವಣ್ಣನವರು, ಬುದ್ಧ, ಏಸುಕ್ರಿಸ್ತ ಇತ್ಯಾದಿ., ಅವುಗಳಲ್ಲಿ ಎಲ್ಲಾ ಮಹಾತ್ಮರುಗಳ ಶಿರದ ಹಿಂಭಾಗದಲ್ಲಿ ಸೂರ್ಯನನ್ನು ಚಿತ್ರಿಸಿರುತ್ತಾರೆ. ಅದರ ಉದ್ದೇಶವೇನೆಂದರೆ, ಅವರ ಒಂದು ಶಕ್ತಿವಲಯವು ಅತ್ಯಂತ ಶಕ್ತಿಪೂರ್ಣವಾಗಿತ್ತು ಎಂಬುದನ್ನ ಸೂಚಿಸಲು. ಅದೇ ರೀತಿಯಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ಸಹ ಈ ರೀತಿಯ ಶಕ್ತಿವಲಯಗಳಿರುವುದು. ಅದನ್ನೇ 'ಪ್ರಭಾವಳಿ' ಎಂದು ಕರೆಯಲಾಗುವುದು, ಈ ಪ್ರಭಾವಳಿಯು ವ್ಯಕ್ತಿಯ ಕಾಯ, ಮನಸ್ಸು, ಭಾವನೆ ಹಾಗು ಆಧ್ಯಾತ್ಮಿಕ ಶಕ್ತಿಯ ಕಂಪನಗಳಿಗೆ ಸಂಬಂಧಿಸಿರುತ್ತದೆ. ಇದನ್ನ ಆಂಗ್ಲ ಭಾಷೆಯಲ್ಲಿ Aura- energy field ಎಂದು ಕರೆಯುತ್ತಾರೆ.

ಒಬ್ಬ ವ್ಯಕ್ತಿಯ ಪ್ರಭಾವಳಿಯು ಆಯ ವ್ಯಕ್ತಿಯ ಕುಂಡಲಿನಿ ಚಕ್ರದ ಶಕ್ತಿಯ ಆಧಾರದ ಮೇಲೆ ರೂಪುಗೊಳ್ಳುತ್ತದೆ. ಹೆಚ್ಚು ಹೆಚ್ಚು ಲಿಂಗಾಂಗಯೋಗ ಸಾಧನೆಯಲ್ಲಿ ತೊಡಗಿದ ಶರಣನಲ್ಲಿ ಈ ಶಕ್ತಿಯು ಅನಂತ ಪ್ರಭೆಯಿಂದ ಶಕ್ತಿಶಾಲಿಯಾಗಿರುತ್ತದೆ. ಅದಕ್ಕೆ ಉದಾಹರಣೆ ಈ ಕೆಳಗಿನ ವಚನ:

ಎನ್ನ ಆಧಾರದಲ್ಲಿ ಅರವತ್ತು ಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು
ಎನ್ನ ಸ್ವಾದಿಷ್ಠಾನದಲ್ಲಿ ಎಪ್ಪತ್ತುಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು.
ಎನ್ನ ಮಣಿಪೂರಕದಲ್ಲಿ ಎಂಬತ್ತುಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು.
ಎನ್ನ ಅನಾಹತದಲ್ಲಿ ತೊಬಂತ್ತುಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು
ಎನ್ನ ವಿಶುದ್ದಿಯಲ್ಲಿ ನೂರುಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು
ಎನ್ನ ಆಜ್ಞೇಯದಲ್ಲಿ ಅನಂತಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು
ಎನ್ನ ಬ್ರಹ್ಮರಂಧ್ರದಲ್ಲಿ ಅಗಣಿತಕೋಟಿ
ಸೂರ್ಯಚಂದ್ರಾಗ್ನಿ ಪ್ರಕಾಶವನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು,
ಎನ್ನ ಶಿಖಾಚಕ್ರದಲ್ಲಿ ಅಖಂಡ ಬೆಳಗನೊಳಕೊಂಡು ಬೆಳಗುತಿರ್ಪಿರಯ್ಯಾ ನೀವು

ಇಂತು ಎನ್ನೊಳಗೆ ಥಳಥಳಿಸಿ ಬೆಳಗುವ ಬೆಳಗಿನ ಬೆಳಗು
ಮಹಾಬೆಳಗಿನೊಳಗೆ ಮುಳುಗಿ ಎನ್ನಂಗದ ಕಳೆಯಳಿದಿರ್ದೆನಯ್ಯಾ, ಅಖಂಡೇಶ್ವರ.


ಷಣ್ಮುಖ ಸ್ವಾಮಿಗಳು ಅಪಾರ ಜ್ಞಾನ ಮತ್ತು ತಪೋ ಸಾಧನೆಯಿಂದ ಒಂದೊಂದು ಚಕ್ರಗಳ ಶಕ್ತಿಯ ವಿಶಿಷ್ಟತೆಯನ್ನು ಇಲ್ಲಿ ವಿವರಿಸಿದ್ದಾರೆ. ಇದು ಕೇವಲ ಊಹೆಗೂ ಮೀರಿದ್ದು ಎಂದೆನಿಸಬಹುದು ಆದರೆ ಇದು ಸತ್ಯ. ಬಸವಣ್ಣನವರ ಬಳಿ ಅನೇಕ ದುಷ್ಟರು, ಕ್ರೂರಿಗಳು ಹಗೆತನವನ್ನು ಸಾಧಿಸಲು ಬಂದರು, ಆದರೆ ಅವರ ಅಪರಿಮಿತವಾದ ಪ್ರಭಾವಳಿಯ ಸಂಪರ್ಕ ವಲಯದೊಳಗೆ ಬರುತ್ತಿದ್ದಂತೆಯೆ ಕ್ರೂರಿಗಳು ಕರುಣೆ ತುಂಬಿ ಗುರು ಬಸವಣ್ಣನವರಿಗೆ ಶರಣಾಗತರಾದದ್ದು ಇತಿಹಾಸ. ಅದೇ ರೀತಿ ಬುದ್ಧನ ಜೀವನ ಚರಿತ್ರೆಯಲ್ಲಿಯು ಅಂಗುಲಿಮಾಲ ಎಂಬ ಕ್ರೂರಿ ಬುದ್ಧನ ಸಂಪರ್ಕಕ್ಕೆ ಬಂದ ತಕ್ಷಣ ಪರಮ ಸಾತ್ವಿಕನಾಗಿ ಮಾರ್ಪಟ್ಟಿದ್ದು ನಮಗೆಲ್ಲ ತಿಳಿದ ಸಂಗತಿ. ಅದಕ್ಕಾಗಿಯೇ ಶರಣರು ಸಜ್ಜನರ ಸಂಘಕ್ಕೆ ಮನ್ನಣೆ ನೀಡಿದ್ದರು, ಏಕೆಂದರೆ ಶರಣರ ಸಂಪರ್ಕಕ್ಕೆ ಬಂದಾಗ ಅವರಲ್ಲಿರುವ ಧನಾತ್ಮಕ ಶಕ್ತಿಯ ತರಂಗಗಳು ನಮ್ಮ ವ್ಯಕ್ತಿತ್ವದ ಮೇಲೆ ಬಹಳ ಪರಿಣಾಮವನ್ನುಂಟುಮಾಡುವವು. ಅದಕ್ಕಾಗಿಯೇ ಜಕ್ಕಣಯ್ಯ ಶರಣರು ಹೀಗೆ ಹೇಳುವರು.


ಶಿವಾಚಾರದಲ್ಲಿ ನಡೆವ ಶರಣರ ಪಾದದ ಅಂಘ್ರಿಯಲ್ಲಿ ಎನ್ನನಿರಿಸಯ್ಯ
ಅಂತಪ್ಪ ಶಿವಶರಣರ ಗೃಹವ ಹೊಗಲಾಗಿ
ಸರ್ವಾಂಗವೆಲ್ಲವೂ ಲಿಂಗಮಯವಾದವು ನೋಡಾ
ಝೇಂಕಾರ ನಿಜಲಿಂಗಪ್ರಭುವೆ.

ಈ ಮೇಲಿನ ವಚನದ ಉದ್ದೇಶ ಇಡೀ ಬ್ರಹ್ಮಾಂಡದ ಶಕ್ತಿಯ ಕಣಗಳು ಹೆಚ್ಚು ಹೆಚ್ಚು ಸಾಧನೆ ಮಾಡಿದ ಶರಣನ ಶಕ್ತಿಯ ವಲಯದಲ್ಲಿ ಶೋಭಿಸುತ್ತಿರುತ್ತವೆ ಎಂಬುದಾಗಿದೆ. ಶಕ್ತಿಯ ವಲಯಗಳಲ್ಲಿ ಎರಡು ವಿಧ.

1.ಧನಾತ್ಮಕ ಶಕ್ತಿ , 2.ಋಣಾತ್ಮಕ ಶಕ್ತಿ

ಧನಾತ್ಮಕ ಶಕ್ತಿಯು ಶಾಂತಿ, ಪ್ರೇಮ, ಕರುಣೆ, ದಯೆಯನ್ನು ಪ್ರತಿನಿಧಿಸಿದರೆ, ಋಣಾತ್ಮಕ ಶಕ್ತಿಯು ಕ್ರೌರ್ಯ, ಅಹಿಂಸೆ, ತಾಮಸ ಪದಾರ್ಥ ಸೇವನೆ ಇತ್ಯಾದಿ ಅಂಶಗಳನ್ನು ಒಳಗೊಂಡಿರುತ್ತದೆ. ನಮ್ಮಲ್ಲಿ ಇನ್ನೂ ಅರಿಷಡ್ವರ್ಗಗಳು ಅಡಗಿಲ್ಲವೆಂದರೆ, ನಮ್ಮೊಳಗೆ ಇನ್ನೂ ಧನಾತ್ಮಕ ಶಕ್ತಿಯ ಕೊರತೆ ಇದೆ ಎಂದು ನಾವು ಭಾವಿಸಬೇಕು. ನಿಜವಾದ ಸಾಧಕ ಮಾತ್ರ ಇಂತಹ ಧನಾತ್ಮಕ ಶಕ್ತಿಗಳನ್ನು ಹೊಂದಿರುತ್ತಾನೆ. ನಾವು ಗುರು ಬಸವಣ್ಣನವರ ಜೀವನ ಚರಿತ್ರೆಯಲ್ಲಿ ನೋಡಿರುತ್ತೇವೆ, ಬಸವಣ್ಣನವರನ್ನು ನಿಂದಿಸಿದವರು, ಸ್ತುತಿಸಿದವರು ಎಷ್ಟೋ ಜನರಿದ್ದರು, ಆದರೆ ಗುರು ಬಸವಣ್ಣನವರು ಮಾತ್ರ ಸ್ತುತಿ–ನಿಂದೆಗಳಿಗೆ ಒಳಗಾಗದೆ ಇರುತ್ತಿದ್ದಿದ್ದು ಮಾತ್ರವಲ್ಲದೇ ಎಂತಹ ದೋಷಿಗಳನ್ನು ಪ್ರೀತಿಯಿಂದ ಕಾಣುತ್ತಿದ್ದರು, ಅವರ ಸಾಧನೆಯ ಪ್ರಭಾವ ಎಷ್ಟಿತ್ತೆಂದರೆ ಕೆಸರ ಮೇಲಿನ ಕಮಲದಂತೆ ಸಂಸಾರ ಮತ್ತು ಸಮಾಜ ಎಲ್ಲದರಲ್ಲೂ ಇದ್ದರೂ ಇಲ್ಲದಂತೆ ನಿರ್ಲಿಪ್ತರಾಗಿದ್ದರು. ಇದು ಒಬ್ಬ ಯೋಗಿಯ ನಿಜವಾದ ಲಕ್ಷಣ. ಸುಖ–ದುಃಖ, ಲಾಭ–ನಷ್ಟ, ಜಯ–ಅಪಜಯ, ಸ್ತುತಿ–ನಿಂದೆ ಏನೇ ಬಂದರೂ ಅದಕ್ಕೆ ಒಳಗಾಗದೆ, ಸರ್ವರಲ್ಲಿಯೂ ಪರಮಾತ್ಮನ ಅಂಶವನ್ನು ಕಾಣುವವನೇ, ಸರ್ವರನ್ನು ಸಾತ್ವಿಕತೆಯಿಂದ ಪ್ರೀತಿಸುವವನೆ ನಿಜ ಯೋಗಿ, ಆತನೇ ನಿಜ ಶರಣ.


ನೀಲಾಂಬಿಕಾ ತಾಯಿಯವರ ಐಕ್ಯಮಂಟಪ
(ತಂಗಡಗಿಯ)ಯ ವಿಹಂಗಮ ನೋಟ



October Sanchike Published on 03-10-2017
Name of the Printer - Sumuka Printers, Bengalure-560010
Registered with Registrar of News Papers in India, New Delhi No.19988/70
Postal Registration (SSP os BG-West Dn)No.KA/BGW-50/wpp-17/2015-17,
Licenced to Post the Printed Magazine without Prepayment (WPP-17).
Posted at Bengalure PSO, Mysuru Road, (Bg-560026) on 3rd, 6th, 10th, 20th of every month, Pages 32+4